# HOW INDIA CAN HELP FRAME GLOBAL RULES FOR AI SAFETY



**ANIL K ANTONY**

National Secretary and spokesperson, BJP

THE emergence of steam engines, electricity and computers—the primary drivers of the first three industrial revolutions—brought about transformations that shaped the economic, social and cultural landscapes of their eras. We are currently said to be at the initial phase of the fourth industrial revolution, led by advancements in several cutting-edge technologies. Artificial intelligence (AI) stands out as its talismanic driver.

Computational power has long adhered to Moore's Law, doubling every two years. The growth of AI has accelerated even more, with current algorithms and programs capable of efficiently processing vast amounts of data, providing insights, performing tasks and solving complex problems at speeds and capabilities that were once unimaginable for humans.

Its applications have already percolated across every sector, tremendously boosting our productivity. AI is projected to contribute $15.7 trillion to the global economy in 2030, with $6.6 likely to come from increased productivity, and the rest from consumption-side effects.

Healthcare has improved with the integration of AI. Our doctors can use predictive analytics for patient outcomes, give personalised treatment recommendations and analyse medical images to assist in diagnosis. Education saw the advent of virtual tutors and learning platforms that can adapt to individual student needs. Agriculture sector is witnessing an increasing adoption of precision farming techniques and automated AI-guided machinery for tasks such as planting and harvesting.

Personalised recommendation tools have become integral components of every digital platform, including social media, e-commerce, and publishing. Automated vehicles and drones are now mainstays in the armed forces that can perform military operations without endangering soldiers. Communication and outreach to the people are also undergoing never seen before disruption. Recently, AI tool Bhashini facilitated the real-time translation of the prime minister's Hindi speech to Tamil at the Kashi Tamil Sangamam. In a not-so-distant future, it is highly probable that we will have AI-powered earphones capable of translating conversations in real time, facilitating seamless communication between individuals who do not understand each other's languages.

Generative AI (GenAI) has further expanded the scope of possibilities. Popular GenAI applications such as Midjourney and OpenAI's DALL-E, can take text inputs and generate distinctive digital images. OpenAI's ChatGPT can provide detailed outputs, generating essays, stories and computer code in response to queries.

The rapid advancement of AI has also triggered widespread apprehensions due to its potential for harm. The accessibility of powerful AI tools has empowered amateur programmers to create sophisticated malware and virus codes, significantly heightening cybersecurity and cyberterrorism threats. The proliferation of deepfake videos featuring public figures and the generation of AI-created images capable of inciting violent and negative public sentiments have become commonplace.



WIKIMEDIA COMMONS

**OpenAI co-founder Sam Altman had suggested setting up a global watchdog for AI similar to the Atomic Energy Agency. India, which has just taken over as chair of the Global Partnership on AI, a forum of 28 countries and the EU, has a chance to set the course**

These can be hard to discern, and if left unaddressed, they could inflict massive damage in a world heavily influenced by digital narratives and content. AI-generated tools frequently face criticism for inheriting biases from their programmers. Intelligent machines are increasingly deployed in military operations where they can make life and death decisions.

In the recent past, the Biden administration in the US issued an executive order establishing foundational norms for the development and use of AI. Earlier this month, the European Union had also drafted a provincial set of guidelines for this sector. The G7 summit held in Hiroshima this May had initiated the Hiroshima AI process , with the stated objective of the creation and promotion of human-centric and trustworthy AI based on Organisation for Economic Co-operation and Development principles. OpenAI's Sam Altman had earlier suggested setting up an intergovernmental watchdog for overseeing AI similar to the International Atomic Energy Agency , that works under the UN framework.

Global consensus during these turbulent times of intensified geopolitical rivalries would be difficult. The major powers are also attempting to slow each other's course of innovation. The US has imposed restrictions on the sale of advanced chips, crucial for driving AI development, to China. In response, Beijing has retaliated by implementing export regulations on Gallium and Germanium, both critical minerals for semiconductor manufacturing.

Against this backdrop, India has just taken over as the chair of the Global Partnership on Artificial Intelligence (GPAI), a forum of 28 countries and the EU working together on the opportunities and challenges of AI. Prime Minister Modi, while addressing the inaugural session, stressed the need for global collaboration with the widest participation to harvest the full potential of AI.

The G20 summit this year witnessed the emergence of India as the preeminent voice for the Global South. We were also able to showcase our digital public infrastructure as a powerful enabler for the world's digital and developmental transformation. GPAI has the potential to position India at the forefront of establishing a secure, safe, and inclusive global standard and governance model for the most transformative technology of our era.

*(Views are personal)*

*(Tweets @anilkantony)*

# ದೇವಾ, ನಿನ್ನ ಮನೆಯನ್ನು ಮೊದಲು ಚೆನ್ನಾಗಿಟ್ಟುಕೋ!



ನೂರೆಂಟು ವಿಶ್ವ
ವಿಶ್ವೇಶ್ವರ ಭಟ್
vveditoped@gmail.com

ಇಷ್ಟರಲ್ಲೇ ಅಯೋಧ್ಯೆಯಲ್ಲಿ ರಾಮಮಂದಿರ ಉದ್ಘಾಟನೆಗೊಳ್ಳಲಿದೆ. ಈಗಾಗಲೇ ಭವ್ಯ ಮಂದಿರದ ಚಿತ್ರಣವನ್ನು ಕಟ್ಟಿಕೊಡುವ ಹಲವು ಫೋಟೋಗಳು, ಮಾಧ್ಯಮಗಳಲ್ಲಿ, ಸಾಮಾಜಿಕ ಜಾಲತಾಣಗಳಲ್ಲಿ ಓಡಾಡುತ್ತಿದೆ. ಚಿತ್ರಗಳಂತೂ ಮಜಬೂತಾಗಿದೆ. ಅದು ಉದ್ಘಾಟನೆಗೊಳ್ಳುತ್ತಿದ್ದಂತೆಯೇ ಅಲ್ಲಿಗೊಮ್ಮೆ ಭೇಟಿ ನೀಡಲೇಬೇಕೆನಿಸಿದೆ.

ನಾನು ಕಾಲಕಾಲಕ್ಕೆ ಪುಣ್ಯಕ್ಷೇತ್ರಗಳಿಗೆ ಹೋಗುವ ಜಾಯಮಾನ ಇಟ್ಟುಕೊಂಡವ. ಭಾರತದ ಬಹುತೇಕ ತೀರ್ಥಕ್ಷೇತ್ರಗಳಿಗೆ ಭೇಟಿ ನೀಡಿದ್ದೇನೆ. ಇದಕ್ಕೆ ಪ್ರಚೋದನೆ ನೀಡಿದ್ದು ಓಶೋ ಅವರ 'ನನ್ನ ಪ್ರೀತಿಯ ಭಾರತ' (ಈ ಕೃತಿಯನ್ನು ನಾನೇ ಕನ್ನಡಕ್ಕೆ ಅನುವಾದ ಮಾಡಿದ್ದೇನೆ) ಹಾಗೂ 'ಭಾರತದ ಆತ್ಮ: ದೇಗುಲಗಳು' ಭಾರತದಲ್ಲಿರುವ ದೇವಾಲಯ ಹಾಗೂ ಪುಣ್ಯಕ್ಷೇತ್ರಗಳಿಗೆ ಭೇಟಿ ಕೊಡದೇ ದೇಶವನ್ನು ಅರ್ಥ ಮಾಡಿಕೊಳ್ಳಲು ಸಾಧ್ಯವಿಲ್ಲ, ಕಾರಣ ಭಾರತದ ಅಂತಃಸತ್ವವಿರುವುದೇ ಈ ಪುಣ್ಯಕ್ಷೇತ್ರಗಳಲ್ಲಿರುವ ದೇಗುಲಗಳಲ್ಲಿ. ಭಾರತದ ದೇವಾಲಯಗಳು ಕೇವಲ ಧಾರ್ಮಿಕ ನಂಬಿಕೆಗಳ ತಾಣವಷ್ಟೇ ಅಲ್ಲ, ಅವು ನಮ್ಮ ಶ್ರದ್ಧೆ ಹಾಗೂ ಸಂಸ್ಕೃತಿಯ ನೆಲೆವೀಡು ಸಹ ಹೌದು. ಅಲ್ಲದೇ ಇವು ನಮ್ಮ ಸಾಂಸ್ಕೃತಿಕ ಮತ್ತು ಸಾಮಾಜಿಕ ಚಟುವಟಿಕೆಗಳ ಕೂಡುತಾಣಗಳೂ ಹೌದು. ಈ ಎಲ್ಲ ಸಂಗತಿಗಳನ್ನು ಓಶೋ ಬಹಳ ಪರಿಣಾಮಕಾರಿಯಾಗಿ ವಿವರಿಸಿದ್ದಾರೆ. ಪ್ರತಿ ದೇವಾಲಯ, ಪುಣ್ಯಕ್ಷೇತ್ರದ ಜತೆಗೆ ಹಲವು ನಂಬಿಕೆ, ಐತಿಹ್ಯ, ಪೌರಾಣಿಕ, ಚಾರಿತ್ರಿಕ ಮಹತ್ವದ ಕತೆಗಳಿವೆ. ಈ ದೇಶದ ಆತ್ಮವಿರುವುದೇ ಪುಣ್ಯಕ್ಷೇತ್ರಗಳಲ್ಲಿ. ಪುಣ್ಯ ಗಳಿಕೆ, ಪಾಪನಾಶಕ್ಕಿಂತ ಜ್ಞಾನವರ್ಧನೆಯ ಭಾವ ಬೆಳೆಸಿಕೊಂಡರೆ, ದೇವಾಲಯಗಳ ಭೇಟಿ ಫಲಪ್ರದವಾಗುತ್ತದೆಂಬ ಓಶೋ ಮಾತು ಸತ್ಯ.

ಪ್ರತಿ ದೇವಾಲಯದ ಹಿಂದೆ ಧಾರ್ಮಿಕ ಕಾರಣಗಳೇನೇ ಇರಲಿ, ಅದನ್ನು ಕಟ್ಟಿದ ಕತೆಯೇ ರೋಚಕ. ಯಾವುದೋ ಒಂದು ಬೋಳುಗುಡ್ಡದ ಮೇಲೆ ರಾತ್ರೋರಾತ್ರಿ ಒಂದು ಕಲ್ಲನ್ನು ನೆಟ್ಟರೆ ಸಾಕು, ಅದು ಬೆಳಗಾಗುವ ಹೊತ್ತಿಗೆ ಒಂದು ಪುಣ್ಯಕ್ಷೇತ್ರವಾಗಿರುತ್ತದೆ. ಅದರ ಸುತ್ತಮುತ್ತ ನೂರಾರು ಕತೆಗಳು ಹುಟ್ಟಿಕೊಳ್ಳುತ್ತವೆ. ಜನ ಮುಗಿಬಿದ್ದು ತಮ್ಮ ಶ್ರದ್ಧೆ, ನಂಬಿಕೆಗಳನ್ನು ಧಾರೆಯೆರೆಯಲಾರಂಭಿಸುತ್ತಾರೆ. ಸಾವಿರಾರು ಭಕ್ತರು ಎಲ್ಲೆಲ್ಲಿಂದಲೋ ಬರಲಾರಂಭಿಸುತ್ತಾರೆ. ಇದರಿಂದ ಜನರಿಗೆ ಏನು ಪ್ರಯೋಜನವಾಗುವುದೋ ಗೊತ್ತಿಲ್ಲ, ಆದರೆ ಸಾಂತ್ವನ, ನೆಮ್ಮದಿಯಂತೂ ಸಿಗುತ್ತದೆ. ಹೀಗಾಗಿ ದೇಶದ ಯಾವುದೇ ದೇವಾಲಯ, ಮಠ, ಪುಣ್ಯಕ್ಷೇತ್ರ, ಧಾರ್ಮಿಕ ಕೇಂದ್ರಗಳಿಗೆ ಹೋಗಿ, ಜನವೋ ಜನ. ಎಲ್ಲೆಡೆ ಜನಜಂಗುಳಿ. ಅದರಲ್ಲೂ ಶನಿವಾರ, ಭಾನುವಾರ ಹಾಗೂ ರಜಾದಿನಗಳಲ್ಲಿ ಕಾಲಿಡಲು ಆಗದಷ್ಟು ಜನಜಾತ್ರೆ.

ವಾರಾಣಸಿ ಸೇರಿದಂತೆ ಇಡೀ ದೇಶದ ಹಲವು ಪ್ರಸಿದ್ಧ ಕ್ಷೇತ್ರಗಳನ್ನು ಸಂದರ್ಶಿಸಿದಾಗೆಲ್ಲ ಅನಿಸಿದ್ದು, ಅಲ್ಲಿನ ಅವ್ಯವಸ್ಥೆ, ಅಸಹನೀಯ ಪರಿಸರವನ್ನು ಸಹಿಸಿಕೊಂಡು ನಿಜಕ್ಕೂ ದೇವರು ಇನ್ನೂ ಲ್ಲೇ ಉಳಿದಿದ್ದಾನಾ? ಪ್ರಧಾನಿ ನರೇಂದ್ರ ಮೋದಿಯವರು ಹಠಕ್ಕೆ ಬಿದ್ದು ವಿಶ್ವನಾಥ್ ಧಾಮ್ ಕಾರಿಡಾರ್ ಅನ್ನು ಅನುಷ್ಠಾನಗೊಳಿಸದೇ ಹೋಗಿದ್ದರೆ, ನಮ್ಮ ಪಾರಂಪರಿಕ ನಂಬಿಕೆಯ ಕ್ಷೇತ್ರ ಕಾಶಿ ಇನ್ನು ಂದು ಶತಮಾನ ಕಳೆದರೂ ಹಿಂದಿನದಕ್ಕಿಂತ ಭಿನ್ನವಾಗಿರುತ್ತಿರಲಿಲ್ಲವೇನೋ? ಹೀಗೆಯೇ ಎಲ್ಲ ಕ್ಷೇತ್ರಗಳನ್ನು ಬದಲಿಸುತ್ತಾ ಹೋಗುವುದಾದರೆ ಮೋದಿಯವರಿಗೆ ಇನ್ನೂ ಎರಡು ಅವಧಿಯ ಅಧಿಕಾರವೂ ಸಾಲದು.

ಬಹಳಷ್ಟು ಸಮಯದವರೆಗೆ ಮಹಾರಾಷ್ಟ್ರದ ಅಹಮದ್ ನಗರ ಜಿಲ್ಲೆಯಲ್ಲಿರುವ ಅತ್ಯಂತ ಪ್ರಸಿದ್ಧ ಯಾತ್ರಾಸ್ಥಳ ಶಿರಡಿಗೆ ಹೋಗಿರಲಿಲ್ಲ. ಶ್ರೀ ಸಾಯಿ ಬಾಬಾ ಅವರ ಕತೆ, ವೃತ್ತಾಂತ, ಪವಾಡಗಳ ಬಗ್ಗೆ ಕೇಳಿದ್ದೆ. ಆದರೆ ಶಿರಡಿಯನ್ನೇ ನೋಡಿರಲಿಲ್ಲ. ತಿರುಪತಿಯ ನಂತರ ಅತ್ಯಂತ ಹೆಚ್ಚು ಭಕ್ತರು, ಜನರು ಭೇಟಿ ನೀಡುವ ಕ್ಷೇತ್ರವೆಂದರೆ ಶಿರಡಿ. ಶನಿವಾರ ಹಾಗೂ ರಜಾ ದಿನಗಳಲ್ಲಿ ಲಕ್ಷಕ್ಕೂ ಅಧಿಕ ಭಕ್ತರು ಆಗಮಿಸುತ್ತಾರೆ. ಉಳಿದ ದಿನ ಏನಿಲ್ಲವೆಂದರೂ 30-40 ಸಾವಿರ ಮಂದಿ ಅಲ್ಲಿಗೆ ಬರುತ್ತಾರೆ. ಇಂಥ ಸಂದರ್ಭಗಳಲ್ಲಿ ಎಂಟು-ಹತ್ತು ತಾಸು ಕ್ಯೂದಲ್ಲಿ ನಿಲ್ಲಬೇಕಾಗುತ್ತದೆ. ಭಕ್ತರಲ್ಲೂ ಪಕ್ಷಪಾತ. ಹಣವುಳ್ಳವರು, ಹಣವಿಲ್ಲದವರು ಎಂಬ ಎರಡು ವರ್ಗ. ಹಣವಿಲ್ಲದವರಿಗೆ ಉಚಿತ ದರ್ಶನ. ಹೀಗಾಗಿ ಗಂಟೆಗಟ್ಟಲೆ ಕಾಯಲೇಬೇಕು. ಹೆಚ್ಚು ಹಣಕೊಟ್ಟು, ಪ್ರಭಾವ ಬೀರಿದರೆ ದೇವರ ಸನ್ನಿಧಾನಕ್ಕೆ ತಾಪ್ಪೇತೋಪ್ಪು ಪ್ರವೇಶ. ಹತ್ತು ನಿಮಿಷಗಳಲ್ಲಿ ದರ್ಶನ ಮುಗಿಸಿ ಹೊರಬರಬಹುದು. ಈ ಪದ್ಧತಿ ಎಲ್ಲ ಪುಣ್ಯಕ್ಷೇತ್ರಗಳಲ್ಲೂ ಜಾರಿಗೆ ಬಂದಿದೆ. ಆದರೆ ಉಚಿತ ದರ್ಶನಕ್ಕಾಗಿ ಕ್ಯೂದಲ್ಲಿ ಐದಾರು ಗಂಟೆ ನಿಲ್ಲುವ ಭಕ್ತರ ಗೋಳನ್ನು ನೋಡಲಾಗುವುದಿಲ್ಲ, ಅದರಲ್ಲೂ ವೃದ್ಧರು, ಕಾಯಿಲೆಪೀಡಿತರ ಸಂಕಟ ಅಷ್ಟಿಷ್ಟಲ್ಲ.

ಇಷ್ಟೊಂದು ಅಗಾಧ ಪ್ರಮಾಣದಲ್ಲಿ ಭಕ್ತರು ಹರಿದು ಬರುವ ಪುಣ್ಯಕ್ಷೇತ್ರಗಳ ಅಸಲಿ ಸಮಸ್ಯೆಯೇನೆಂದರೆ, ಸ್ವಚ್ಛತೆಯ ಕೊರತೆ. ಎಲ್ಲೆಡೆ ಹೊಲಸು, ಗಬ್ಬುನಾತ, ಅವ್ಯವಸ್ಥೆ, ಸುಲಿಗೆ, ಪೀಡನೆ, ದೇವರ ದರ್ಶನಕ್ಕೆ ಲಂಚ. ಗರ್ಭಗುಡಿಯಲ್ಲಿ ದೇವರ ಹತ್ತಿರ ನಿಂತು, ಹೆಚ್ಚು ಕಾಲ ಇದ್ದು ದರ್ಶನ ಪಡೆಯಲು ಲಂಚ. ಪ್ರಸಾದಕ್ಕೂ ಲಂಚ. ಪೂಜೆಗೆ ಲಂಚ. ಸಾಕ್ಷಾತ್ ದೇವರ ಸಾನ್ನಿಧ್ಯದಲ್ಲೇ ಲಂಚಾವತಾರ ಪ್ರದರ್ಶನ! ಹೀಗಿರುವಾಗ ಮನಸ್ಸಿನಲ್ಲಿ ಪುಣ್ಯಭಾವ ಸೃಜಿಸುವುದಾದರೂ ಹೇಗೆ?

ದೇವಾಲಯದ ಪ್ರಾಂಗಣದಲ್ಲಿಯೇ ಸ್ವಚ್ಛತೆ, ಸೌಂದರ್ಯ ನೆಗೆದುಬಿದ್ದಿರುತ್ತದೆ. ಎಲ್ಲೆಂದರಲ್ಲಿ ಕಸ, ಪ್ಲಾಸ್ಟಿಕ್, ತುಂಬಿ ತುಳುಕುವ ಕಸದ ತೊಟ್ಟಿಗಳು, ಬೀದಿನಾಯಿ, ಕಿತ್ತುಹೋದ ಫುಟ್‌ಪಾತ್, ರಸ್ತೆಗಳು, ಫ್ಲೆಕ್ಸ್ ಬೋರ್ಡ್, ಭಿಕ್ಷುಕರು, ಬಣ್ಣ ಮಾಸಿದ ಗೋಡೆಗಳು, ಎಲ್ಲೆಂದರಲ್ಲಿ ನೇತುಬಿದ್ದಿರುವ ವಾಯರ್‌ಗಳು... ಎಲ್ಲಿ ನೋಡಿದರೂ ಅಸ್ತವ್ಯಸ್ತ, ಅವ್ಯವಸ್ಥೆ.. ದೇಗುಲದ ಪ್ರಾಂಗಣದೊಳಗೆ ಕಪ್ಪುಮಸಿಯಿಂದ ಆವೃತವಾದ ಚಾವಣಿ, ಗೋಡೆಗಳು, ಗರ್ಭಗುಡಿ ಪ್ರವೇಶ ದ್ವಾರದಲ್ಲಿ ದೊಡ್ಡ ಟಿವಿ ಪರದೆ, ಆನೆಯ ಕಾಲಿನ ಗಾತ್ರದ ಪೈಪುಗಳು, ನೂರಾರು ತಂತಿಗಳು.. ದಿನಕ್ಕೆ ಲಕ್ಷಾಂತರ ಜನ ಭೇಟಿಕೊಡುವ ಜಾಗದಲ್ಲಿ ಸೌಂದರ್ಯದ ಬಗ್ಗೆ ಕನಿಷ್ಠ ಪ್ರಜ್ಞೆಯೂ ಬೇಡವೇ? ಗಲೀಜು, ಹೊಲಸು ಜಾಗದಲ್ಲಿ ಭಕ್ತಿ ಅಲ್ಲ, ವಾಕರಿಕೆ ಮೂಡುತ್ತದೆ. ಆದರೆ ಅದ್ಯಾಕೋ ಗೊತ್ತಿಲ್ಲ, ಎಲ್ಲರೂ ಈ ಗಲೀಜು ವಾತಾವರಣವನ್ನೇ ಸಹಿಸಿಕೊಂಡು ಬರುತ್ತಾರೆ.

ಲಕ್ಷಾಂತರ ಮಂದಿ ಭೇಟಿ ನೀಡುವ ಜಾಗದಲ್ಲಿ ಇವೆಲ್ಲ ಸಹಜ ಎಂದು ವಾದಿಸುವವರಿದ್ದಾರೆ. ಆದರೆ ಇದು ಒಂದು ದಿನದ ಮಾತಲ್ಲ, ವರ್ಷವಿಡೀ ಇಷ್ಟೇ ಜನ ಆಗಮಿಸುತ್ತಾರೆಂದ ಮೇಲೆ ಈ ಸಮಸ್ಯೆ ಪರಿಹರಿಸಲು ಸೂಕ್ತ ಕ್ರಮ ಕೈಗೊಳ್ಳಬೇಕು ತಾನೆ? ಅವ್ಯವಸ್ಥೆಯೇ ವ್ಯವಸ್ಥೆಯಾಗಲು ಬಿಡಬಾರದಲ್ಲ? ದೈವತ್ವದಂತೆ ಶುಚಿತ್ವವೂ ಅಷ್ಟೇ ಮಹತ್ವದ್ದು. ಹೊಲಸು ವಾತಾವರಣದಲ್ಲಿ ಭಕ್ತಿ ಸ್ಫುರಿಸುವುದಿಲ್ಲ. ಕೆಲವು ಸಲ ಅಲ್ಲಿನ ಅವ್ಯವಸ್ಥೆ ನೋಡಿದರೆ, 'ಯಾಕಾದರೂ ಬಂದೆವಪ್ಪ, ಮನೆಯಲ್ಲಿಯೇ ಕುಳಿತು ದೇವರಿಗೆ ನಮಸ್ಕಾರ ಮಾಡಬಹುದಿತ್ತಲ್ಲ, ಈ ಹೊಲಸನ್ನು ನೋಡಲು ಹಣ, ಸಮಯ ಖರ್ಚು ಮಾಡಿಕೊಂಡು ಇಷ್ಟು ದೂರ ಬರಬೇಕಿತ್ತಾ?' ಎಂದು ಒಳಮನಸ್ಸಿಗೆ ಅನಿಸದೇ ಹೋಗುವುದಿಲ್ಲ.

ಹಾಗೆಂದು ಶಿರಡಿಯಂಥ ಕ್ಷೇತ್ರಕ್ಕೆ ಹಣಕಾಸಿನ ತೊಂದರೆ ಇಲ್ಲವೇ ಇಲ್ಲ. ಪ್ರತಿ ವರ್ಷ 400 ಕೋಟಿ ರುಪಾಯಿಯಷ್ಟು ವರಮಾನವಿದೆ. ಭಾರತದ ಶ್ರೀಮಂತ ಕ್ಷೇತ್ರಗಳ ಪೈಕಿ ಇದೂ ಒಂದು. ಇದು ಸರಕಾರದ ಮುಜರಾಯಿ ಇಲಾಖೆಯ ಹಂಗಿನಲ್ಲೂ ಇಲ್ಲ. ಶಿರಡಿ ಸಂಸ್ಥಾನ ಟ್ರಸ್ಟ್ ಈ ಕ್ಷೇತ್ರದ ಮೇಲುಸ್ತುವಾರಿ ಹೊತ್ತಿದೆ. ಹತ್ತಾರು ಕೋಟಿ ರುಪಾಯಿ ಖರ್ಚು ಮಾಡಿದರೆ, ಇಡೀ ಕ್ಷೇತ್ರಕ್ಕೆ ಹೊಸ ರೂಪ ಕೊಡುವುದೇನೂ ಕಷ್ಟವಲ್ಲ. ನೂರಾರು ಸ್ವಯಂಸೇವಕರನ್ನು ನಿಯೋಜಿಸಿದರೆ, ಇಡೀ ಪ್ರಾಂಗಣವನ್ನು ಸ್ವಚ್ಛವಾಗಿಡಬಹುದು. ಆದರೆ ಇಂಥ ಪ್ರಾಥಮಿಕ ಸಂಗತಿಯನ್ನೂ ಅರ್ಥ ಮಾಡಿಕೊಳ್ಳದವರು ಜವಾಬ್ದಾರಿಯುತ ಸ್ಥಾನದಲ್ಲಿ ಹೇಗಿರುತ್ತಾರೋ, ಆಶ್ಚರ್ಯವಾಗುತ್ತದೆ. ಅವರಿಗೆ ಗಲೀಜು ವಾತಾವರಣದಲ್ಲಿ ಇದ್ದೂ ಇದ್ದು ಅಭ್ಯಾಸವಾಗಿ, ಏನೂ ಅನಿಸದ ಸ್ಥಿತಿ ತಲುಪಿರುತ್ತಾರೆ. ಆದರೆ ಜೀವನದಲ್ಲಿ ಮೊದಲ ಬಾರಿಗೆ ಹೋದವರಿಗೆ, ಬಹಳ ಬೇಸರವಾಗುತ್ತದೆ. ಇನ್ನೊಮ್ಮೆ ಹೋಗಲು ಮನಸ್ಸು ಒಪ್ಪುವುದಿಲ್ಲ.

ಅದಾದ ಬಳಿಕ ದ್ವಾದಶ ಜ್ಯೋತಿರ್ಲಿಂಗಗಳ ಪೈಕಿ ನಾಸಿಕ್‌ಗೆ ಸನಿಹದಲ್ಲಿರುವ ತ್ರ್ಯಂಬಕೇಶ್ವರ ಹಾಗೂ ಔರಂಗಾಬಾದ್ ಸಮೀಪವಿರುವ ಗೃಷ್ಣೇಶ್ವರ ಜ್ಯೋತಿರ್ಲಿಂಗ ದರ್ಶನಕ್ಕೆಂದು ಹೋದರೆ, ಅಲ್ಲೂ ಅದೇ ಪರಿಸ್ಥಿತಿ. ದೇವಾಲಯದ ಸುತ್ತ ಕೊಳಚೆ ಮೋರಿನ ದರ್ಶನ, ಗಬ್ಬುನಾತ. 'ಸಾರ್, ಅದು ಮೋರಿ ಅಲ್ಲ, ಪವಿತ್ರ ಗೋದಾವರಿ ನದಿ' ಎಂದು ಅಲ್ಲಿಯೇ ಇದ್ದ ಪೂಜಾರಿಯೊಬ್ಬರು ಆ ಕಡೆ ರಹೋದರು. ದೇಗುಲದ ಗರ್ಭಗುಡಿಯಿಂದ ಹಿಂಭಾಗದಲ್ಲಿ ಹತ್ತು ಮೀಟರ್ ದೂರದಲ್ಲಿ ಒಂದು ಕಾಲದ ಸುಂದರ, ಪವಿತ್ರ ಗೋದಾವರಿ ನದಿ, ಬಚ್ಚಲುಮನೆಯ ಹೊಲಸು ನೀರು ಹರಿಯುವ ಕೊಳಚೆಯಾಗಿ ಪರಿವರ್ತಿತವಾಗಿತ್ತು. ಮುನ್ನೂರು ವರ್ಷಗಳ ಹಿಂದೆ ಕಟ್ಟಿಸಿದ ಗಾಯತ್ರಿದೇವಿ ಮಂದಿರ ಪಾಳು ಬಿದ್ದಿದೆ. ದೇಗುಲದ ಸುತ್ತ ಅಂಗಡಿಗಳು, ಬೋಂಡಾ, ಬಜ್ಜಿ ಕರಿಯುವ ಹೋಟೆಲ್ಲುಗಳು. ಸ್ವಚ್ಛತೆ ಕಾಲ್ಕಿತ್ತು ಬಹಳ ವರ್ಷಗಳೇ ಆಗಿವೆ. ದೇವರ ಮೇಲೆ ಭಾರ ಹಾಕಿ ಸಾಗಬೇಕು. ದೇವಾಲಯದೊಳಗೆ ಪ್ರವೇಶಿಸಿದರೆ, ಎಕ್ಸ್‌ರೇ ರೂಮಿನೊಳಕ್ಕೋ, ಹಳೇ ಟೆಂಟ್ ಸಿನಿಮಾ ಥಿಯೇಟರಿನೊಳಕ್ಕೋ ಹೋದ ಅನುಭವ. ಜ್ಯೋತಿರ್ಲಿಂಗದ ಸನಿಹ ಹೋದರೆ ಪುರೋಹಿತರೆಂಬ ಮಾಫಿಯಾ ದರ್ಬಾರು. ಭಕ್ತಾದಿಗಳಿಗೆಲ್ಲ ಜ್ಯೋತಿರ್ಲಿಂಗವನ್ನು ಕೈಯಿಂದಲೇ ಸ್ಪರ್ಶಿಸಬೇಕೆಂಬ ಹಪಾಹಪಿ. ದೇವರ ಮೈಮುಟ್ಟಿ ಮಾತಾಡಿಸುವ ಹಂಬಲ. ಇನ್ನು ಕೆಲವರಿಗೆ ಜ್ಯೋತಿರ್ಲಿಂಗಕ್ಕೆ ಹಣೆಹಣೆ ತಾಕಿಸಿ ನಮಸ್ಕರಿಸುವ ಚಪಲ. ಬಂದವರೆಲ್ಲ ಕೈಯಲ್ಲಿ ಮುಟ್ಟಿದರೆ, ಹಣೆ ಹಚ್ಚಿದರೆ ಜ್ಯೋತಿರ್ಲಿಂಗದ ಸ್ವಚ್ಛತೆ, ಗತಿಯೇನಾಗಬೇಕು? ಜ್ಯೋತಿರ್ಲಿಂಗದ ಪ್ರಾಂಗಣದಲ್ಲಿ ದುಡ್ಡಿದ್ದವರದೇ ಕಾರುಬಾರು. ಪುರೋಹಿತರ ಕೈಯಲ್ಲಿ 'ಪ್ರಸಾದ' ಇಟ್ಟರೆ ಎಷ್ಟು ಹೊತ್ತಾದರೂ ಇರಬಹುದು. ನಿಮ್ಮ ಇಷ್ಟಾರ್ಥ ಕಾರ್ಯಸಿದ್ಧಿ. ಉಳಿದವರನ್ನು ನೂಕು ಗೋವಿಂದಾ, ನೂಕು!

ಗೃಷ್ಣೇಶ್ವರದಲ್ಲೂ ಇದೇ ಕತೆ. ಇನ್ನು ಈ ಕ್ಷೇತ್ರಗಳಿಗೆ ಹೊಂದಿಕೊಂಡಿರುವ ಕಪಾಲೇಶ್ವರ, ಪಂಚವಟಿ, ಸೀತಾಗುಹಾ, ಗೋದಾವರಿ ಸ್ನಾನಘಾಟ್...ಹೀಗೆ ಎಲ್ಲೇ ಹೋದರೂ ಕೊಳಕು, ದುರ್ನಾತ. ಗೋದಾವರಿ ದಡವನ್ನು ಎಷ್ಟು ಹಾಳುಗೆಡವಬೇಕೋ ಅಷ್ಟು ಹಾಳುಗೆಡವಿದ್ದಾರೆ. ನದಿನೀರಲ್ಲಿ ಮುಳುಕು ಹಾಕಿದರೆ ಅದ್ಯಾವ ಸೀಮೆ ಪುಣ್ಯ ಬರುವುದೋ ಆ ಭಗವಂತನೇ ಹೇಳಬೇಕು. ಪ್ರಾಯಶಃ ಅಲ್ಲಿ ಮುಳುಕು ಹಾಕಿಯೂ ಏನೂ ಆಗಿಲ್ಲವೆಂದರೆ, ಅದು ಭಗವಂತನ ಪವಾಡ, ಲೀಲೆಯೇ ಇರಬೇಕು. ನದಿಯನ್ನೂ ಕತ್ತು ಹಿಡಿದು, ಉಸಿರುಗಟ್ಟಿಸಿ ಸಾಯಿಸುವುದು ಹೇಗೆ ಎಂಬುದನ್ನು ಇಲ್ಲಿ ಸಾಕ್ಷಾತ್ ನೋಡಬಹುದು. ಮೋದಿಯಲ್ಲ, ಖುದ್ದು ಆ ಭಗವಂತನೇ ಬಂದರೂ, ಈ ಪುಣ್ಯನದಿಯನ್ನು ರಕ್ಷಿಸುವುದು ಅಸಾಧ್ಯ!

ಯಾವುದೇ ಕ್ಷೇತ್ರಗಳಿಗೆ ಹೋಗಿ, ಭಕ್ತರು, ಪ್ರವಾಸಿಗರು ಬರುವುದನ್ನೇ ಹೊಂಚುಹಾಕಿ ಕಾಯುತ್ತಿರುತ್ತಾರೆ. ಬರೀ ಮೋಸ, ದಗಲಬಾಜಿತನ. ದೇವರ ಪಕ್ಕದಲ್ಲೇ ಇರುವ ಪುರೋಹಿತರಂತೂ ಭಕ್ತರನ್ನು ಸುಲಿಯಲು ಕಾಯುತ್ತಿರುತ್ತಾರೆ. ಅವರಿಗೆ ಇದೊಂದು ದಂಧೆ. ದೇವರು ಒಂದು ಮಾರಾಟದ, ಪ್ರದರ್ಶನದ ವಸ್ತು. ಸಾವಿರಾರು ಕಿಮೀ ದೂರದಿಂದ ಆಗಮಿಸುವ ಭಕ್ತರ ಮನಸ್ಥಿತಿ ಅವರಿಗೆ ಅರ್ಥವಾಗುವುದಾದರೂ ಹೇಗೆ? ಆ ಪೂಜಾರಿಯೂ ಯಾರ್‍ಯಾರಿಗೋ 'ಪ್ರಸಾದ' ಕೊಟ್ಟೇ ಆ ಆಯಕಟ್ಟಿನ ಜಾಗದೊಳಕ್ಕೆ ಬಂದಿರುತ್ತಾನೆ ಅಥವಾ ಅವನ ಗಳಿಕೆಯಲ್ಲಿ ಬೇರೆಯವರ ಜತೆಗೂ ಪಾಲಿರುತ್ತದೆ. ಅಲ್ಲದೇ ಅವರಿಗೂ ಸೇಲ್ಸ್ ಮ್ಯಾನೇಜರ್‌ಗೆ ನಿಗದಿಪಡಿಸಿದಂತೆ, ಟಾರ್ಗೆಟ್ ಫಿಕ್ಸ್ ಮಾಡಿರುತ್ತಾರೆ. ಹೀಗಾದಾಗ ಪೂಜಾರಿ ಅಕ್ಷರಶಃ ದೇವರನ್ನಿಟ್ಟುಕೊಂಡು ದಂಧೆಗೇ ಇಳಿಯುತ್ತಾನೆ. ಹೀಗಾದರೆ ಭಕ್ತರ ಪಾಡೇನು? ದೇವರ ಗತಿಯೇನು? ದೀಪದ ಬುಡದಲ್ಲೇ ಕತ್ತಲು!

ಇನ್ನೂ ಈ ಬಾರಿಯ ಶಬರಿಮಲೆಯ ಯಾತ್ರಾರ್ಥಿಗಳ ಸ್ಥಿತಿಯಂತೂ ಆ ಅಯ್ಯಪ್ಪನಿಗೇ ಪ್ರೀತಿ. ದೇವರ ದರ್ಶನ ಹಾಗಿರಲಿ, ನೀರು, ಆಹಾರ, ಶೌಚಾಲಯದಂಥ ಕನಿಷ್ಠ ಸೌಲಭ್ಯವನ್ನೂ ದಕ್ಕಿಸಿಕೊಳ್ಳಲಾಗದೇ ನರಕ ದರ್ಶನ ಮಾಡಿಕೊಂಡು ಬಂದವರೇ ಹೆಚ್ಚು.

ತಪ್ಪು ಭಾವಿಸಬೇಡಿ. ನಾನು ಕಾಯಕ ಪ್ರೇಮಿ. ಕಾಯಕಕ್ಕಿಂತ ಮಿಗಿಲಾದ ದೈವವಿಲ್ಲ ಎಂದು ಭಾವಿಸಿದವನು. ಆದರೂ ಎದೆಗೂಡಿನಲ್ಲಿ ಭಕ್ತಿಯಿಂದ ಎಲ್ಲ ದೇವರುಗಳನ್ನೂ ಸಾಕಿಕೊಂಡವನು. ಮನುಷ್ಯ ಪ್ರಯತ್ನಕ್ಕಿಂತ ಮಿಗಿಲಾದ ಶಕ್ತಿಯಿದೆ, ಅದೇ ದೇವರು ಎಂದು ನಂಬಿದವನು. ಆದರೆ ನಮ್ಮ ಪುಣ್ಯಕ್ಷೇತ್ರಗಳು, ಪುಣ್ಯನದಿಗಳನ್ನು ನೋಡಿದರೆ, ಅತೀವ ಸಂಕಟವಾಗುತ್ತದೆ, ವೇದನೆಯಾಗುತ್ತದೆ. ಎಲ್ಲ ಕ್ಷೇತ್ರಗಳಂತೆ, ಧಾರ್ಮಿಕ ಕ್ಷೇತ್ರಗಳೂ ಭ್ರಷ್ಟವಾಗುತ್ತಿದೆಯೆಂಬ ನೋವು ಕಾಡುತ್ತದೆ. 'ಹರ ಕೊಲ್ಲಲ್ ಪರ ಕಾಯ್ವನೇ' ಎಂಬಂತೆ, ದೇಗುಲಗಳೇ ಈ ರೀತಿಯಾದರೆ, ನಮ್ಮ ನಂಬಿಕೆ, ಶ್ರದ್ಧೆಗಳ ಗತಿಯೇನು? ಪಾಪ-ಪುಣ್ಯಕ್ಕೆ ವ್ಯತ್ಯಾಸವೇನು?

ಮುಂದೊಂದು ದಿನ (ಈಗಿನಿಂದಲೇ ಆರಂಭಿಸಬಹುದು) 'ದೇಗುಲಗಳನ್ನು ರಕ್ಷಿಸಿ, ದೇವರುಗಳನ್ನು ಕಾಪಾಡಿ' ಎಂಬ ಅಭಿಯಾನ ಮಾಡಬೇಕಾಗಬಹುದು. ತಮಾಷೆಯಲ್ಲ, ಈಗ ತುರ್ತಾಗಿ ಆಗಬೇಕಿರುವುದೇ ಅದು. 'ಸ್ವಚ್ಛ ಭಾರತ' ಅಭಿಯಾನದಂತೆ, 'ಸ್ವಚ್ಛ ದೇಗುಲ' ಆಂದೋಲನವೂ ಆಗಬೇಕಿದೆ. ಕಾರಣ ದೇಗುಲಗಳೂ ಮಲಿನವಾದರೆ, ನಮ್ಮ ಸಂಸ್ಕೃತಿ ನಾಶವಾದಂತೆ, ನಾಗರಿಕತೆ ಫಾಸಿಯಾದಂತೆ.

ನಮ್ಮ ದೇಶದ ಪ್ರಮುಖ ಪುಣ್ಯಕ್ಷೇತ್ರಗಳಾದ ಮಥುರಾ, ಪುರಿ ಮುಂತಾದ ಕಡೆಗಳಲ್ಲಿ ಪರಿಸ್ಥಿತಿ ಇನ್ನೂ ಭೀಕರವಾಗಿದೆ. ಕಾಶಿಯೂ ಹಾಗೆಯೇ ಇತ್ತು. ಕಾಶಿಯ ಹಿಂದಿನ ಸ್ಥಿತಿಯ ಬಗ್ಗೆ ಬರೆಯದಿರುವುದೇ ವಾಸಿ. ಮೊದಲಿನ ಕಾಶಿಗೆ ಹೋಲಿಸಿದರೆ, ಮಥುರಾ ಹಾಗೂ ಪುರಿ ಎಷ್ಟೋ ಉತ್ತಮ. ಹಾಗೆಂದ ಮೇಲೆ ಕಾಶಿ ಹೇಗಿತ್ತೆಂಬುದನ್ನು ಊಹಿಸಬಹುದು. ಸ್ವತಃ ಮೋದಿಯೇ ಇಡೀ ಕಾಶಿಯನ್ನು ಉದ್ಧಾರ ಮಾಡಲು ಮತ್ತೊಂದು ಅವಧಿ ಬೇಕು ಎಂದು ಹೇಳುತ್ತಿದ್ದಾರಂತೆ. ಆದರೂ ಪ್ರತಿದಿನ ಹತ್ತಾರು ಸಾವಿರ ಭಕ್ತಾದಿಗಳು ಈ ಕ್ಷೇತ್ರಗಳಿಗೆ ಭೇಟಿ ಕೊಡುತ್ತಾರೆ. ಇಲ್ಲಿಗೆ ಬರುವವರ ಸಂಖ್ಯೆ ಇಷ್ಟಾದರೂ ಕಮ್ಮಿಯಾಗಿಲ್ಲ, ಕಾರಣ ಈ ಕ್ಷೇತ್ರಗಳ ಮಹಿಮೆ ಹಾಗೂ ಮಹತ್ವ. ಇಲ್ಲಿಗೆ ಭೇಟಿ ನೀಡಿದ ಯಾರಿಗೇ ಆದರೂ ಅತೀವ ವಿಷಾದ, ಪಶ್ಚಾತ್ತಾಪ ಆಗದೇ ಹೋಗುವುದಿಲ್ಲ. ಯಾಕಾದರೂ ಬಂದೆವೋ ಎಂಬ ಕಹಿ ಭಾವ ಆಗದೇ ಹೋಗುವುದಿಲ್ಲ. ಪುಣ್ಯಕ್ಷೇತ್ರಗಳೆಂಬ ಕಾರಣಕ್ಕೆ ಎಲ್ಲ ಅಸಹನೀಯ, ಅಸಹ್ಯಗಳನ್ನೂ ಮಾಫು ಮಾಡಬೇಕು. ಕೆಲ ವರ್ಷಗಳ ಹಿಂದೆ ನಾನು ಪುರಿಗೆ ಹೋಗಿದ್ದೆ. ದೇಗುಲದಲ್ಲಿದ್ದ ಬಹುತೇಕ ಪುರೋಹಿತರು ಆನೆಕಾಲು ರೋಗದಿಂದ ಬಳಲುತ್ತಿದ್ದರು. ಭಕ್ತರಿಗೆ ಹಣ ಕೊಡುವಂತೆ ದಬಾಯಿಸುತ್ತಿದ್ದರು. ತಾವೇ ಕಿಸೆಗೆ ಕೈ ಹಾಕಿ ಹಣ ಕೀಳುತ್ತಿದ್ದರು. ಇಂಥ ದುಂಡಾವರ್ತನೆ ನೋಡಿ ಆಗಮಿಸಿದ್ದ ಭಕ್ತಾದಿಗಳು ಗರಬಡಿದು ಹೋಗಿದ್ದರು. ಒಂದು ಸಲವಂತೂ ದೇವರ ಸನ್ನಿಧಾನದಲ್ಲಿಯೇ ಪುರೋಹಿತರ ನಡುವೆಯೇ ತಾರಾಮಾರಿ ಜಗಳವಾಯಿತು. ಭಕ್ತರ ಹಣದ ವಿಷಯ ಹಂಚಿಕೆಗೆ ಸಂಬಂಧಿಸಿದಂತೆ ಅವರ ನಡುವೆ ನಡೆದ ಕಲಹವನ್ನು ಜಗನ್ನಾಥ ಮೂಕ ಪ್ರೇಕ್ಷಕನಾಗಿ ಗಮನಿಸುತ್ತಿದ್ದ!

ಮಥುರಾದಲ್ಲಿ ದೇಗುಲಕ್ಕೆ ಹೋಗುವ ದಾರಿ ಶ್ರೀಕೃಷ್ಣ ಪರಮಾತ್ಮನಿಗೇ ಪ್ರೀತಿ! ಇಲ್ಲದಿದ್ದರೆ ಇಂಥ ದಾರಿಯನ್ನು ಆತ ಸಹಿಸುತ್ತಿದ್ದನಾ? ಕೊಳೆಗೇರಿಯ ನೆನಪಾಗುತ್ತದೆ. ಪಕ್ಕದಲ್ಲೇ ಮಸೀದಿ, ಸನಿಹದಲ್ಲಿಯೇ ಮಾಂಸದ ಅಂಗಡಿ. ಆದರೂ ಭಕ್ತರು, ಪ್ರವಾಸಿಗರು ಹೋಗುತ್ತಾರೆ. ಎಷ್ಟೇ ಅಸಹನೀಯವಾದರೂ ಎಲ್ಲವನ್ನೂ ಸಹಿಸಿಕೊಳ್ಳುತ್ತಾರೆ. ಇವನ್ನೆಲ್ಲ ಮರೆತು, ಮನೆಯಲ್ಲಿ ಮಥುರಾದ ಚಿತ್ರವನ್ನಿಟ್ಟು ಗಂಧದ ಕಡ್ಡಿ ಹಚ್ಚುತ್ತಾರೆ.

ನಮ್ಮ ದೇವಾಲಯ, ಪುಣ್ಯಕ್ಷೇತ್ರಗಳ ಹುಳುಕುಗಳನ್ನು ಎತ್ತಿ ತೋರಿಸುವುದು ನನ್ನ ಉದ್ದೇಶವಲ್ಲ. ಆದರೆ ಈಗಿನ ಸ್ಥಿತಿಯಲ್ಲಿ ಅವನ್ನು ಭಕ್ತಿ ಕಾರಣಕ್ಕೆ ಒಪ್ಪಿಕೊಳ್ಳುವುದೂ ಕಷ್ಟವೇ. ಶ್ರದ್ಧೆಯ ತಾಣಗಳನ್ನು ಹೊಲಸು ಮಾಡಿ ಬೇಕಾಬಿಟ್ಟಿಯಾಗಿಟ್ಟರೆ ಯಾರೂ ಕ್ಷಮಿಸುವುದಿಲ್ಲ. ದೇಗುಲಗಳು ಹೇಗಿರಬೇಕು ಎಂಬುದಕ್ಕೆ ಇಸ್ಕಾನ್ ಹಾಗೂ ಸ್ವಾಮಿ ನಾರಾಯಣ ಟ್ರಸ್ಟ್ ನಮಗೆ ಮೇಲ್ಪಂಕ್ತಿ ಹಾಕಿಕೊಟ್ಟಿವೆ. ಇನ್ನಾದರೂ ಎಚ್ಚೆತ್ತುಕೊಳ್ಳದಿದ್ದರೆ, ಮುಂದಿನ ಪೀಳಿಗೆ ನಮ್ಮನ್ನು ಕ್ಷಮಿಸುವುದಿಲ್ಲ.

ದೇವಾ, ನಿನ್ನ ಮನೆಯನ್ನು ಮೊದಲು ಚೆನ್ನಾಗಿಟ್ಟುಕೋ ಎಂದು ದೇವರಿಗೇ ಪ್ರಾರ್ಥಿಸಬೇಕಾಗಿದೆ.

ಸಮಾಜ ಹಿಂದಕ್ಕೆ ಚಲಿಸುತ್ತಿದೆಯೇ? ಹೊಸ ಪಾಳೇಗಾರರಿಗೆ ಶರಣಾಗುತ್ತಿರುವ ಸೂಚನೆಗಳೇ?

# ಸೋರುತಿಹುದು ಮನೆಯ ಮಾಳಿಗೆ



ವಿಶ್ಲೇಷಣೆ

ಸಬಿತಾ ಬನ್ನಾಡಿ

**'ಕತ್ತಿ ಪರದೇಶಿಯಾದರೆ ಮಾತ್ರ ನೋವೆ? ನಮ್ಮವರೆ ಹದಹಾಕಿ ತಿವಿದರದು ಹೂವೆ?'** ಕುವೆಂಪು ಅವರ ಕವಿತೆಯ ಸಾಲು, ನಾಡು ಸ್ವತಂತ್ರವಾಗುವುದು ಎಷ್ಟು ಮುಖ್ಯವೋ ಅಷ್ಟೇ ಮುಖ್ಯವಾದುದು ಅದು ನಿರ್ಮಿಸಿಕೊಳ್ಳುವ ಸಾಮಾಜಿಕ ಬದುಕು ಎಂಬುದನ್ನು ಅತ್ಯಂತ ಖಚಿತವಾಗಿ ಹೇಳುತ್ತದೆ. ಸಾಮಾಜಿಕ ಬದುಕೇ ಅಸಮತೆಯ ಕೆಸರಿನಲ್ಲಿ ಮುಳುಗಿದ್ದರೆ ಯಾವ ರಾಜಕೀಯ ಸ್ವಾತಂತ್ರ್ಯ ಇದ್ದು ಏನು ಫಲ? ಒಲಿಂಪಿಕ್ ಕೂಟದಲ್ಲಿ ದೇಶದ ಕೀರ್ತಿಪತಾಕೆ ಹಾರಿಸಿದ ಸಾಧಕರ ಅಹವಾಲುಗಳನ್ನೇ ಕೇಳದ ಮೇಲೆ ಇನ್ನು ಉಳಿದವರ ಪಾಡೇನು? ಕೊನೆಗೂ ಸಾಕ್ಷಿ ಮಲಿಕ್ ಒಬ್ಬ 'ಹೆಣ್ಣು' ಮಾತ್ರ ಆಗುತ್ತಾ, ಹೆಣ್ಣು ಬಾಯಿಬಿಟ್ಟರೆ ಮಣ್ಣಾಗುತ್ತಾಳೆ ಎಂಬ ಎಚ್ಚರಿಕೆಯನ್ನು ಇಡೀ ದೇಶಕ್ಕೇ ಕೊಡುತ್ತಿರುವ ಅಪಾಯವನ್ನು ಅರಿಯದ ನಮ್ಮ ಅಸಂಖ್ಯ 'ಮುಗ್ಧರು' ಒಂದೋ ಬಾಯಿ ಮುಚ್ಚಿಕೊಂಡಿದ್ದಾರೆ, ಇಲ್ಲವೇ ಅವಳ ವಿರುದ್ಧ ವಾದ ಮಾಡುವ 'ಸೇವೆ'ಯಲ್ಲಿ ತೊಡಗಿಕೊಂಡಿದ್ದಾರೆ.

ಸಾಕ್ಷಿ ಮತ್ತಿತರರು ಎತ್ತಿರುವ ಪ್ರಶ್ನೆ ಯಾವ ಕಾರಣಕ್ಕೂ ವೈಯಕ್ತಿಕವಾದುದಲ್ಲ. ಯಾವುದೇ ಆಟದಲ್ಲಿ ತೊಡಗಿಸಿಕೊಂಡಿರುವ ಯಾವುದೇ ಮಗುವಿನ ಕೂದಲೂ ಕೊಂಕದಂತೆ ನೋಡಿಕೊಳ್ಳುವ ಹೊಣೆಗಾರಿಕೆ ದೇಶದ ಆಳುವವರದು ಮತ್ತು ಪ್ರಜೆಗಳದೂ ಆಗಿದೆ. ಇಲ್ಲವಾದಲ್ಲಿ ಎಲ್ಲಿ ನಮ್ಮ ರಾಷ್ಟ್ರಗೀತೆ ಮೊಳಗಿದರೇನು? ಅದರ ಹಿಂದೊಂದು ಶೋಕಗೀತೆ ಇರುವುದಾದರೆ? ಇಷ್ಟು ಜನಸಂಖ್ಯೆಯ ಅಪಾರ ಪ್ರತಿಭಾವಂತರ ಈ ನೆಲದಲ್ಲಿ ಅಂಜಿಕೆ, ಅಡೆತಡೆ, ತರತಮಗಳಿಲ್ಲದ ಸಾಮಾಜಿಕತೆಯು ಇದ್ದಿದ್ದೇ ಆಗಿದ್ದರೆ ಭಾರತ ಸದಾ ಮೊದಲ ಸ್ಥಾನದಲ್ಲೇ ಇರುತ್ತಿರಲಿಲ್ಲವೇ? ಮೆಡಲು ತಂದುಕೊಡುತ್ತಿರುವ ಈ ಬಡಮಕ್ಕಳ ಕತ್ತಿನ ಮೇಲೆ ಕಾಲಿಟ್ಟಿರುವ ಮತಿಹೀನರ ಬಗೆಗೆ ಇಡೀ ದೇಶಕ್ಕೇ ಭಯವೇ? ಪ್ರಚಂಡ ನಾಯಕರಿಗೂ ನಡುಕವೇ?

ದೇಶಭಕ್ತಿಯನ್ನು ಕಾರ್ಡಿನಂತೆ ಚಲಾಯಿಸುವವರಿಗೆ ದೇಶೀಯರನ್ನೇ ದೇಶದ್ರೋಹಿಗಳಾಗಿಸುವಲ್ಲಿರುವ ಅಮಿತ ಉತ್ಸಾಹದ ಹಿಂದಿರುವುದು ದೇಶಹಿತವಲ್ಲ, ಸ್ವಹಿತ ಎಂಬುದಿನ್ನೂ ಯಾಕೆ ಅರಿವಿಗೆ ಬರುತ್ತಿಲ್ಲ? 'ಮಾನವೀಯತೆಯಿಲ್ಲದ ರಾಷ್ಟ್ರೀಯತೆಯನ್ನು ನಾನು ಒಪ್ಪುವುದಿಲ್ಲ' ಎಂದು ರವೀಂದ್ರನಾಥ ಟ್ಯಾಗೋರ್ ಹೇಳುತ್ತಾರೆ. ಇದೊಂದು ಸರಳ ಹೇಳಿಕೆಯಲ್ಲ ಎಂಬುದಕ್ಕೆ ಇಂದು ಜಗತ್ತಿನಲ್ಲಿ ನಡೆಯುತ್ತಿರುವ ವಿದ್ಯಮಾನಗಳೇ ನಿದರ್ಶನ.

ರಾಷ್ಟ್ರೀಯತೆಯು ಅಸ್ತ್ರವಾದಾಗ ಅದು ಎಲ್ಲರ ಕೈಗೆ ಸಿಗುವ ಯಜಮಾನಿಕೆಯಾಗಿ ಬದಲಾಗುತ್ತದೆ. ಆ ಯಜಮಾನಿಕೆಯು ಮತ್ತು ಏರಿದಾಗ ಅಲ್ಲಿ ಕರುಣೆ, ಮೈತ್ರಿಗೆ ಅವಕಾಶವಾಗಲೀ ಅರ್ಥವಾಗಲೀ ಇರುವುದಿಲ್ಲ. ಎಲ್ಲೋ ಕೆಲವರು ಅಂತಃಕರಣದಿಂದ ಮಿಡಿಯುವ, ಸಹಾಯ ಮಾಡುವ ಸಂಗತಿಗಳು ಅಪರೂಪದಲ್ಲಿ ಕಾಣಸಿಗಬಹುದು. ಉಳಿದಂತೆ ಜನಸಾಮಾನ್ಯರೂ ದಡ್ಡುಗಟ್ಟಿ ಹೋಗುತ್ತಾರೆ. ಹೆಂಗಸರೂ ಈ ಉನ್ಮಾದವನ್ನು ಅಫ್ಘಾನಿಸ ತೊಡಗುತ್ತಾರೆ. ಸಮೂಹ ಸನ್ನಿಯ ಸನ್ನಿವೇಶ ನಿರ್ಮಾಣವಾಗಿ ಅದು ಅವರಿಗೆ ಭದ್ರತೆಯ ಭ್ರಮೆಯನ್ನು ಹುಟ್ಟುಹಾಕತೊಡಗುತ್ತದೆ. ಈಗಷ್ಟೇ ಹುಟ್ಟಿದ ಮಗುವೂ ಅವರಲ್ಲಿ ಮೃದುತ್ವವನ್ನು ಹುಟ್ಟಿಸಲಾರದಷ್ಟು ಅಮಾನುಷತೆಯು ರಕ್ತಗತವಾಗುವ ಪರಿಯ ಅಗಾಧತೆಯನ್ನು ಅಂದಾಜಿಸಬಹುದು.

ಪ್ಯಾಲೆಸ್ಟೀನ್ ಸಿನಿಮಾ 'ಫರಾ'ದಲ್ಲಿ ಒಂದು ದೃಶ್ಯ ಬರುತ್ತದೆ. 1948ರಲ್ಲಿ ಪ್ಯಾಲೆಸ್ಟೀನಿಯನ್ನರ ಮನೆಮನೆಯನ್ನೂ ಆಕ್ರಮಿಸಿ, ನಿಶ್ಶಸ್ತ್ರಗೊಳಿಸಿ ಅಟ್ಟಲಾಗುತ್ತದೆ. ದಾಳಿಗೆ ಸಿಲುಕಿದ ತುಂಬು ಗರ್ಭಿಣಿಯು ತನ್ನ ಗಂಡ, ಇಬ್ಬರು ಹೆಣ್ಣುಮಕ್ಕಳೊಂದಿಗೆ ಓಡುವಾಗ ಹೆರಿಗೆ ನೋವು ಕಾಣಿಸಿಕೊಳ್ಳುತ್ತದೆ. ಸುರಕ್ಷಿತ ಎನಿಸಿದ ಖಾಲಿ ಮನೆಯೊಂದರೊಳಗೆ ಗಂಡನ ಸಹಾಯದಿಂದ ಹೆರಿಗೆಯಾಗಿ ಗಂಡುಮಗುವೊಂದು ಜನಿಸುತ್ತದೆ. ಇಸ್ರೇಲ್ ಪಡೆ ಅಲ್ಲಿಗೂ ನುಗ್ಗುತ್ತದೆ. ಅವರು ಅಡಗಿಕೊಂಡರೂ ಉಪಯೋಗವಾಗದೆ ಸಾಲಾಗಿ ನಿಲ್ಲಿಸಿ ಶೂಟ್ ಮಾಡುತ್ತಾರೆ. ಅವರಲ್ಲಿ ಒಬ್ಬ ಹೆಂಗಸೂ ಇರುತ್ತಾಳೆ. ಅವಳಿಗೆ ಕರುಣೆಯ ಪಸೆಯೂ ಇರುವುದಿಲ್ಲ.

ಹುಟ್ಟಿದ ಮಗುವಿಗೇಕೆ ಒಂದು ಬುಲೆಟ್ ವೇಸ್ಟ್ ಮಾಡುವುದು, ಹಾಗೇ ಕೊಲ್ಲು ಎಂದು ಸೈನಿಕನಿಗೆ ಸೀನಿಯರ್ ಆದೇಶಿಸುತ್ತಾನೆ. ಅವನಿಗೆ ಕಷ್ಟವೆನಿಸಿ ಮಗುವಿನ ಮೇಲೆ ತನ್ನ ಕರ್ಚೀಫ್ ಹೊದೆಸಿ ಹಾಗೇ ಬಿಟ್ಟು ಹೋಗುತ್ತಾನೆ. ಅದು ಅಲ್ಲೇ ಬಿಸಿಲಲ್ಲಿ ಅತ್ತು ಅತ್ತು ಸತ್ತುಹೋಗುತ್ತದೆ. ಅವರದೇ ದೇಶದಲ್ಲಿ, ಅವರುಗಳದೇ ಮನೆಗಳಲ್ಲಿ ಅವರುಗಳೇ ಅನಾಥರಾದ 'ನಕ್ಬಾ' ಎಂಬ ಹೆಸರಿನ ಆಕ್ರಮಣದ ಸಂದರ್ಭವಿದು. ಈ ಆಕ್ರಮಣ ಮಾಡಿದ ಇಸ್ರೇಲಿಗರಿಗೆ ಜಗತ್ತು ಇಂದು ಹೆದರುತ್ತಿದೆ! ಅವರು ಕೇಳದಿದ್ದರೂ, ಯಾಚಿಸದಿದ್ದರೂ ಸಹಾಯಹಸ್ತ ಚಾಚಿ ನಿಂತಿದೆ! ಇಂತಹ ಮನಃಸ್ಥಿತಿಯಲ್ಲಿ ನಾವೂ ಇರುವಾಗ ಸಾಕ್ಷಿ ಮಲಿಕ್, ಬಜರಂಗ್ ಪೂನಿಯಾ ಅವರಿಗೆ ಬೆಂಬಲ ಬರುವುದಾದರೂ ಎಲ್ಲಿಂದ?

ನಾವು ಸದಾ ಸುಳ್ಳುಗಳನ್ನೇ ವೈಭವೀಕರಿಸಿ ಬದುಕುವುದನ್ನು ಇಷ್ಟಪಡುತ್ತೇವೆ. ಆದರೆ ಸತ್ಯ ಹೇಳಿದ ಕೂಡಲೇ ಶತ್ರುಗಳಾಗಿಬಿಡುತ್ತೇವೆ. ಸಮಾಜದಲ್ಲಿನ ಅಧಿಕಾರದ ಸ್ಥಾನಗಳನ್ನು ಹಿಡಿದಿದ್ದ ಕೆಲವೇ ಕೆಲವು ಜಾತಿಯ ಜನರು ಅಧಿಕಾರಹೀನ ಜಾತಿಯ ಹೆಂಗಸರನ್ನು ಹೇಗೆ ನಡೆಸಿಕೊಂಡಿದ್ದರು ಎಂಬ ಇತಿಹಾಸವನ್ನೇ ಮರೆಮಾಚಿ, ಇನ್ನೊಂದು ಧರ್ಮದ ಕತೆಗಳನ್ನು ಮುನ್ನೆಲೆಗೆ ತರುತ್ತೇವೆ. ದೇವನೂರ ಮಹಾದೇವ ಅವರ 'ಮಾರಿಕೊಂಡವರು' ಕತೆಯನ್ನು ಮತ್ತೊಮ್ಮೆ ಓದಿ ನೋಡಿ. ಬಡತನದ ದಳ್ಳುರಿಯಲ್ಲಿ ಬೆಂದ ಜನ ಹಸಿವಿನಲ್ಲಿ ಬೇಯುವುದಷ್ಟೇ ಅಲ್ಲ ಜೊತೆಗೇ ಹೆಂಗಸರ ದೇಹದ ಮೇಲೆ ಅಧಿಕಾರಸ್ಥ ಜಾತಿಗಳ ಗಂಡಸರು ಮಾಡುವ ಆಕ್ರಮಣಗಳನ್ನೂ ಮೌನವಾಗಿ ಸಹಿಸಿಕೊಳ್ಳಬೇಕಾದ ಅಸಹಾಯಕತೆಯನ್ನು ಬಡ ಹೆಂಗಸರು ಮತ್ತು ಗಂಡಸರ ಮೇಲೆ ಹೇರಿರುತ್ತಾರೆ. ತಮ್ಮ ಸ್ವಾಭಿಮಾನವನ್ನೇ ಮಾರಿಕೊಳ್ಳುವ ಒತ್ತಡದಲ್ಲಿದ್ದವರು ಕಾಲಾಂತರದಲ್ಲಿ ಸರ್ಕಾರದ ಕೆಲವು ಯೋಜನೆಗಳ ಫಲವಾಗಿ ಅಕ್ಷರವನ್ನೂ ಅನ್ನವನ್ನೂ ಆ ಮೂಲಕ ತಕ್ಕಮಟ್ಟಿನ ಸ್ವಾವಲಂಬನೆಯನ್ನೂ ಸಾಧಿಸಲು ಸಾಧ್ಯವಾಯಿತು.

ಹಿಂದೂ ಹೆಂಗಸರ ಮೇಲಿನ ಈ ಹಿಂದೂ ಗಂಡಸರ ಆಕ್ರಮಣಗಳ ಇತಿಹಾಸವನ್ನು ಮರೆಮಾಚಿ ಹೊಸ ಕತೆ ಕಟ್ಟುತ್ತಿರುವವರು ಧರ್ಮವನ್ನು ಮತ್ತೆ ಯಜಮಾನಿಕೆಯ ಅಸ್ತ್ರವಾಗಿಸಿ, ಇದೇ ಬಡ ಹಿಂದೂಗಳನ್ನು ತಮ್ಮ ದಾಳಗಳಾಗಿಸಿಕೊಳ್ಳಲು, ಕಾಲಾಳುಗಳನ್ನಾಗಿಸಿಕೊಳ್ಳಲು ಬಲೆ ಹೆಣೆಯುತ್ತಿದ್ದು ಅದರಲ್ಲಿ ಯಶಸ್ವಿಯೂ ಆಗುತ್ತಿದ್ದಾರೆ. ಇಂದು ಇವರು ಇದಕ್ಕಾಗಿ ಬೇರೆ ಧರ್ಮದವರನ್ನು ಶತ್ರು ಸ್ಥಾನದಲ್ಲಿ ನಿಲ್ಲಿಸುತ್ತಿದ್ದಾರೆ.

ಮಣಿಪುರ ಎಂಬ ಪುರಾತನ ಪರಂಪರೆಯ ನಾಡು ಇವರಿಗೀಗ ನೆನಪಿಗೇ ಬರುವುದಿಲ್ಲ. ಮಣಿಪುರವಾದರೇನು? ಬೆಳಗಾವಿಯ ಹೊಸ ವಂಟಮೂರಿ ಆದರೇನು? ಎರಡೂ ಅಕ್ಷಮ್ಯ, ನಾಚಿಕೆಗೇಡಿನ ಪ್ರಕರಣಗಳೇ. ಆದರೆ ಬೆಳಗಾವಿಗೆ ಓಡೋಡಿ ಬಂದು ಅಲ್ಲಿನ ಲೈಟುಕಂಬಗಳನ್ನು ಪರಿಶೀಲಿಸುವ, ಉಡುಪಿಗೆ ಬಂದು ಶೌಚಾಲಯದಲ್ಲಿ ಕ್ಯಾಮೆರಾ ಹುಡುಕುವ ಟಾಸ್ಕ್‌ಗಳನ್ನು ತಲೆಮೇಲೆ ಹೊತ್ತ ಸೊಫಿಸ್ಟಿಕೇಟೆಡ್ ಹೆಂಗಸರನ್ನು ನೋಡುವಾಗ ನನಗೆ ಇನ್ನೊಂದು ಪ್ಯಾಲೆಸ್ಟೀನಿ ಸಿನಿಮಾ ನೆನಪಾಗುತ್ತಿದೆ. '3000 ನೈಟ್ಸ್' ಎಂಬ ಈ ಸಿನಿಮಾದಲ್ಲಿ ನವವಿವಾಹಿತ ನಿಷ್ಪಾಪಿ ಪ್ಯಾಲೆಸ್ಟೀನ್ ಯುವತಿಯನ್ನು ಜೈಲಿಗೆ ತಳ್ಳುತ್ತಾರೆ. ಅವಳು ಗರ್ಭಿಣಿ ಎಂಬುದು ಆ ನಂತರ ಗೊತ್ತಾಗುತ್ತದೆ. ಗರ್ಭಪಾತಕ್ಕೆ ಒಪ್ಪದೆ ಅಲ್ಲಿಯೇ ಹೆತ್ತು ಬೆಳೆಸಲು ಆಕೆ ನಿರ್ಧರಿಸುತ್ತಾಳೆ. ಗಂಡುಮಗು ಜನಿಸಿದಾಗ ಜೈಲಿನ ಹೆಂಗಳೆಯರಲ್ಲೊಂದು ಸಂಚಲನ ಆಗುತ್ತದೆ. ಆದರೆ ಇಸ್ರೇಲಿ ಕೈದಿ ಹೆಂಗಸರು, 'ಇನ್ನೊಬ್ಬ ಭಯೋತ್ಪಾದಕನನ್ನು ಹುಟ್ಟಿಸಿದೆಯಾ?' ಎಂದು ಅರಚುವುದನ್ನೂ ಇಸ್ರೇಲ್ ಸ್ತ್ರೀ ಪೊಲೀಸ್ ಅಧಿಕಾರಿಗಳು ಅತ್ಯಂತ ಕ್ರೂರವಾಗಿ ಹೆಂಗಸರನ್ನು ನಡೆಸಿಕೊಳ್ಳುವುದನ್ನೂ ನೋಡಿದಾಗ, ಮಾನವೀಯತೆ ಎಂಬುದರ ಅರ್ಥವಾದರೂ ಏನು ಎಂಬ ದೊಡ್ಡ ಪ್ರಶ್ನೆ ಹುಟ್ಟಿಕೊಳ್ಳುತ್ತದೆ.

ನಮ್ಮಲ್ಲೇ ಮುಸ್ಲಿಂ ಹೆಂಗಸರನ್ನು ಅತ್ಯಂತ ಹೀನಾಯವಾಗಿ ಲೇವಡಿ ಮಾಡುವ ಅಸಹ್ಯ ಭಾಷಣಕಾರರು ತಮ್ಮದೇ ಧರ್ಮದ ಹೆಂಗಸರನ್ನು ಗೌರವಿಸಲು ಸಾಧ್ಯವೇ? ಸಾಕ್ಷಿ ಮಲಿಕ್ ವ್ಯವಸ್ಥೆಗೆ ಶರಣಾಗಬೇಕೆಂದು ಬಯಸುವವರು ಹೆಣ್ಣಿನ ದೇಹದ ಘನತೆಯನ್ನು ಗೌರವಿಸುತ್ತಾರೆ ಎಂದು ನಿರೀಕ್ಷಿಸಬಹುದೇ? ಇವೆಲ್ಲವೂ ಇವರಿಗೆ ಜಾತಿ, ಧರ್ಮ, ಪ್ರದೇಶ, ಪಕ್ಷದಂತಹ 'ಲಾಭ'ಗಳೊಂದಿಗೆ ತಗಲುಹಾಕಿಕೊಂಡಿರುವ ಅಂತಃಸಾಕ್ಷಿಯಿಲ್ಲದ ಬಾಹ್ಯ ಚರ್ಮಗಳು ಅಷ್ಟೇ. ಆದರೆ ದೇಶದ ಕೀರ್ತಿಪತಾಕೆಯನ್ನು ಬಾನೆತ್ತರಕ್ಕೆ ಏರಿಸಲು ಸಾಕ್ಷಿ ಮಲಿಕ್‌ಳ ಪಾದಗಳನ್ನು ಪೊರೆದ ಬೂಟುಗಳು ಈ ದೇಶ ಎಚ್ಚರಿಕೆಯಿಂದ ಗಮನಿಸಬೇಕಾದ ಹೊಸ ರೂಪಕಗಳು. ಈ ಅರಿವು ನಮ್ಮನ್ನು ಪೊರೆಯಲಿ.



# ಇದು ತುಂಗಭದ್ರೆಯ ಕಣ್ಣೀರಿನ ಕಥೆ...

**ತುಂಗಭದ್ರಾ ಜಲಾಶಯದ ರುದ್ರರಮಣೀಯ ಸೌಂದರ್ಯದ ಪರದೆಯನ್ನು ಸೀಳಿ ಒಳಹೊಕ್ಕರೆ ನಮ್ಮ ಭವಿಷ್ಯವನ್ನು ಕಂಗಾಲಾಗಿಸುವ ವಾಸ್ತವ ರಾಚುತ್ತದೆ. ತುಂಗಭದ್ರೆಯ ಕರಾಳಕಥೆ ಇರುವುದು ಅದು ಭರ್ತಿಯಾದಾಗ ನಳನಳಿಸುವ ಜಲರಾಶಿಯ ಸಮ್ಮೋಹಕ ದೃಶ್ಯದಲ್ಲಲ್ಲ; ಬದಲಿಗೆ ಅದರ ಒಡಲನ್ನು ತುಂಬುತ್ತಿರುವ ಹೂಳಿನಲ್ಲಿ.**



ಭಾಸ್ಕರಾಯಣ

ಎಂ.ಕೆ. ಭಾಸ್ಕರ ರಾವ್

vveditoped@gmail.com

ತುಂಗಭದ್ರಾ ಜಲಾಶಯದಲ್ಲಿ 31 ಟಿಎಂಸಿ ಹೂಳು ತುಂಬಿದೆ. ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಿರುವ ಹೂಳಿನ ಪ್ರಮಾಣ, ಕರ್ನಾಟಕದ ಕಾಯ್ದೆಬದ್ಧ ನೀರನ್ನು ತೆಲಂಗಾಣ, ಆಂಧ್ರಪ್ರದೇಶಕ್ಕೆ ಹರಿಯುವಂತೆ ಮಾಡಿದೆ. ಕಾವೇರಿ ನೀರಿನ ವಿಚಾರದಲ್ಲಿ ಸರಕಾರ, ರಾಜಕೀಯ ಪಕ್ಷಗಳು, ರೈತ-ಕನ್ನಡ ಸಂಘಟನೆಗಳು ನಿರಂತರ ಬೊಬ್ಬೆ ಹೊಡೆಯುತ್ತವೆ. ಅಚ್ಚರಿ ಎಂದರೆ ತುಂಗಭದ್ರಾ, ಕೃಷ್ಣಾ ವಿಚಾರದಲ್ಲಿ ಅವು ಅರ್ಥವಾಗದ ಮೌನಕ್ಕೆ ಜಾರುತ್ತವೆ. ತುಂಗಭದ್ರೆ ಒಡಲ ನೋವು ಕೇಳುವವರು ಯಾರು?

ಹೊಸಪೇಟೆ ಬಳಿ ತುಂಗಭದ್ರಾ ನದಿಗೆ ಸಮುದ್ರ ಮಟ್ಟದಿಂದ 1633 ಅಡಿ ಎತ್ತರಕ್ಕೆ ನಿರ್ಮಿಸಿರುವ ಅಣೆಕಟ್ಟೆ ಪಂಪಾಸಾಗರ, ತನ್ನ ಗಾತ್ರ, ರುದ್ರರಮಣೀಯ ಸೌಂದರ್ಯದ ದೃಷ್ಟಿಯಿಂದ ಗಮನ ಸೆಳೆಯುತ್ತದೆ. ಆದರೆ ಆ ಸೌಂದರ್ಯದ ಪರದೆಯನ್ನು ಸೀಳಿ ಒಳ ಹೊಕ್ಕರೆ ನಮ್ಮ ಭವಿಷ್ಯವನ್ನು ಕಂಗಾಲು ಸ್ಥಿತಿಗೆ ತರುವ ವಾಸ್ತವ ರಾಚುತ್ತದೆ. ತುಂಗಭದ್ರಾದ ಕರಾಳಕಥೆ ಇರುವುದು ಅದು ಭರ್ತಿಯಾದಾಗ ನಳನಳಿಸುವ ಜಲರಾಶಿಯ ಸಮ್ಮೋಹಕ ದೃಶ್ಯದಲ್ಲಲ್ಲ; ಬದಲಿಗೆ ಅದರ ಒಡಲನ್ನು ತುಂಬುತ್ತಿರುವ ಹೂಳಿನಲ್ಲಿ. ಕರ್ನಾಟಕ, ಆಂಧ್ರಪ್ರದೇಶ, ತೆಲಂಗಾಣ ಸರಕಾರಗಳ ಅಧಿಕೃತ ಪ್ರಾತಿನಿಧ್ಯವಿರುವ ತುಂಗಭದ್ರಾ ಮಂಡಳಿ ಲೆಕ್ಕಾಚಾರದಂತೆ ಜಲಾಶಯದಲ್ಲಿ ಪ್ರಸ್ತುತ 31 ಟಿಎಂಸಿಗೂ ಅಧಿಕ ಹೂಳು ಸಂಗ್ರಹವಾಗಿ ಜಲಾಶಯದ ಜಲ ಧಾರಣಾ ಸಾಮರ್ಥ್ಯವನ್ನು 100.85 ಟಿಎಂಸಿಯಿಂದ 79.85 ಟಿಎಂಸಿಗೆ ಕುಗ್ಗಿಸಿದೆ.

ಜಲಾಶಯದಲ್ಲಿ ನೀರು ಹೆಚ್ಚಾದಾಗ, ಮಳೆಗಾಲದಲ್ಲಿ ಉಕ್ಕಿ ಹರಿಯುವಾಗ ಅಣೆಕಟ್ಟೆ ಸಂಗ್ರಹ ಸಾಮರ್ಥ್ಯ ಮೀರುವಾಗ ನದಿಪಾತ್ರಕ್ಕೆ ನೀರನ್ನು ಹರಿಸುವುದು ಸಾಮಾನ್ಯ, ಪ್ರಕೃತಿ ಸಹಜ. ಅಣೆಕಟ್ಟೆಯ ಕೆಳಗಿನ ಪ್ರದೇಶಕ್ಕೆ ಇದು ಒಂದು ರೀತಿಯಲ್ಲಿ ಬೇಡದೇ ಬಯಸದೇ ಒಲಿದು ಬರುವ ವರ. ಆದರೆ ಅಣೆಕಟ್ಟೆಗಾಗಿ ಸಹಸ್ರ ಸಹಸ್ರ ಹಳ್ಳಿ ಊರುಗಳನ್ನು ಸಾವಿರಾರು ಎಕರೆ ಕೃಷಿ ಅರಣ್ಯ ಪ್ರದೇಶವನ್ನು ಬಲಿಗೊಟ್ಟ ರಾಜ್ಯಕ್ಕೆ ಏನು ಲಾಭ? ಇದೊಂದು ರೀತಿಯಲ್ಲಿ ತನ್ನಲ್ಲಿದ್ದುದನ್ನೆಲ್ಲ ಕೊಟ್ಟು ತಾನೇ ಭಿಕ್ಷುಕನಾಗುವ ಪರಿ. ವಿಶ್ವವಿಖ್ಯಾತ ಹಂಪಿ ತುಂಗಭದ್ರಾ ದಂಡೆ ಮೇಲಿರುವ ಊರು. ಅಣೆಕಟ್ಟೆ, ಜಲಾಶಯ ಎಂಬ ಕಾರಣಕ್ಕೆ ಅದು ತೊಂದರೆಗೆ ಈಡಾಗಿಲ್ಲ, ಅದೊಂದು ಪ್ರಾಚೀನ ಪಳೆಯುಳಿಕೆ. ಆದರೆ ಅಣೆ ಕಾರಣಕ್ಕೆ ಮುಳುಗಡೆಯಾದ ಪ್ರದೇಶದ ಕಥೆ? ನಿರ್ವಸಿತರಾದವರ ಲಕ್ಷ ಲಕ್ಷ ಜನರ ವ್ಯಥೆ? ಪಾಟೀಲ ಪುಟ್ಟಪ್ಪ, ಎಂ.ಪಿ.ಪ್ರಕಾಶ ಅವರಂಥವರು ಆಗಾಗ ಹೇಳುತ್ತಿದ್ದ 'ಹಂಪಿ ಪ್ರಾಚೀನ, ತುಂಗಭದ್ರಾ ಅಣೆಕಟ್ಟೆ ಪ್ರಾರಬ್ಧ' ಎಂಬ ಮಾತು ಈ ವಾಸ್ತವದ ಹಿನ್ನೆಲೆಯಲ್ಲಿ ಈಗೀಗ ಹೆಚ್ಚು ಸತ್ಯವಾಗುವ ಲಕ್ಷಣ ಕಾಣಿಸುತ್ತಿದೆ.

ಸಂಗ್ರಹವಾಗದೆ ಹರಿದುಹೋಗುವ 31 ಟಿಎಂಸಿ ನೀರಿನ ಮೇಲೆ ಕರ್ನಾಟಕ ಸ್ವಾಮ್ಯ ಸಾಧಿಸಲಾಗದು. ಕೂತಲ್ಲೆ ಕುಳಿತು ಚಡಪಡಿಸುವುದರ ಆಚೆಗೆ ಅದರ ಕೈಲಿ ಏನೂ ಮಾಡಲಾಗದ ಸ್ಥಿತಿ. 31 ಟಿಎಂಸಿ ನೀರು ಅನಾಯಾಸವಾಗಿ ಬಂದಿದೆ ಎಂಬ ಕಾರಣಕ್ಕೆ ತೆಲಂಗಾಣ, ಆಂಧ್ರ ಹಂಚಿರುವ ನೀರಿನಲ್ಲಿ ಒಂದಿಷ್ಟು ಕೊಡು-ಕೊಳ್ಳುವ ಮನೋಧರ್ಮ ಅನುಸರಿಸಲಿವೆಯೇ ಎಂದರೆ ಊಹೂಂ ಇಲ್ಲವೇ ಇಲ್ಲ, ಕರ್ನಾಟಕದ ಸ್ಥಿತಿ 'ಗಾಣದವನ ಜತೆ ಕಷ್ಟ ಹೇಳಿಕೊಂಡಂತೆ'. ಹಾಗಂತ ಈ ಸಮಸ್ಯೆಗೆ ಮದ್ದು, ಪರಿಹಾರವೇ ಇಲ್ಲವೇ ಎಂದರೆ ಇದೆ. ಪರಿಹಾರ ರೂಪವಾಗಿ ದಶಕಗಳಿಂದ ಚರ್ಚೆಗೆ ಒಳಗಾಗಿರುವುದು ಸಮಾನಾಂತರ ಜಲಾಶಯಗಳನ್ನು (ಬ್ಯಾಲೆನ್ಸಿಂಗ್ ರಿಸರ್ವಾಯರ್ಸ್) ನಿರ್ಮಿಸಿ ನೀರನ್ನು ಕಾಪಿಟ್ಟುಕೊಳ್ಳುವುದು. ಕೊಪ್ಪಳ ಜಿಲ್ಲೆಯ ನವಿಲೆ ಎಂಬಲ್ಲಿ ಅಜಮಾಸು 40 ಟಿಎಂಸಿ ನೀರಿನ ಸಂಗ್ರಹ ಸಾಮರ್ಥ್ಯದ ಸಮಾನಾಂತರ ಜಲಾಶಯ ನಿರ್ಮಿಸುವುದು ಕರ್ನಾಟಕ ಸರಕಾರದ ಆಶಯ, ಗುರಿ. ಈ ಯೋಜನೆಯ ಪ್ರಸ್ತಾಪವಾಗುತ್ತಿದ್ದಂತೆ ಆಗಿನ ಸಂಯುಕ್ತ ಆಂಧ್ರಪ್ರದೇಶ ತಕರಾರು ಒಡ್ಡಿತು. ಈಗ ಅದು 2 ರಾಜ್ಯವಾಗಿ ತಕರಾರಿನ ಸ್ವರ ತಾರಕಕ್ಕೆ ಏರಿದೆ.

ತುಂಗಭದ್ರಾ ನದಿ ಕೃಷ್ಣಾ ಕೊಳ್ಳದ ಭಾಗ. ಕೃಷ್ಣಾ ನದಿನೀರು ಹಂಚಿಕೆ ಕುರಿತ ಬಚಾವತ್ ಆಯೋಗದ ಒಪ್ಪಂದಕ್ಕೆ ಮಹಾರಾಷ್ಟ್ರ, ಕರ್ನಾಟಕ, ತೆಲಂಗಾಣ, ಆಂಧ್ರಪ್ರದೇಶ ಬಾಧ್ಯಸ್ಥ ರಾಜ್ಯಗಳು. ಪ್ರಸ್ತುತ ತುಂಗಭದ್ರಾ ನದಿ ಅಣೆಕಟ್ಟೆ ನೀರು ಹಂಚಿಕೆ ಮಹಾರಾಷ್ಟ್ರ ಹೊರತಾದ 3 ರಾಜ್ಯಕ್ಕೆ ಸೀಮಿತ. ಕ್ಯಾತೆ ತಕರಾರು ಏನೇ ಎದುರಾಗುವುದಿದ್ದರೂ ಅದು ನೇರವಾಗಿ ಬರುವುದು ಆಂಧ್ರ, ತೆಲಂಗಾಣದಿಂದ. ನವಿಲೆ ಜಲಾಶಯವನ್ನು ನಿರ್ಮಿಸುವುದರಿಂದ ನದಿನೀರು ಹಂಚಿಕೆಯ ಸೂತ್ರದ ಉಲ್ಲಂಘನೆ ಆಗುತ್ತದೆ ಎನ್ನುವುದು ಈ ರಾಜ್ಯಗಳ ಬೊಬ್ಬೆ, ಅಹವಾಲು, ದುಃಖ, ದೂರು. ಈಗಾಗಲೇ 31 ಟಿಎಂಸಿ ನೀರು ಕಳೆದುಕೊಂಡ ಕರ್ನಾಟಕ ತನ್ನ ಪಾಲಿನದನ್ನು ಕಾಪಾಡಿಕೊಳ್ಳುವುದಕ್ಕೆ ನಡೆಸಿರುವ ಕಸರತ್ತು ಇತರ ಎರಡು ರಾಜ್ಯಗಳ ಹಿತಾಸಕ್ತಿಗೆ ಹೇಗೆ ಮಾರಕ ಎಂದು ಕೇಳಿದರೆ ಅದಕ್ಕೆ ನಿಖರವಾದ ಉತ್ತರ ಇಲ್ಲ, ವಿರೋಧ ಒಡ್ಡಬೇಕು ಹಾಗಾಗಿ ವಿರೋಧ ಎನ್ನುವುದರ ಆಚೆಗೆ ಆಂಧ್ರ, ತೆಲಂಗಾಣದಲ್ಲಿ ಸಮರ್ಥನೀಯ ಬಂಡವಾಳ ಇಲ್ಲ, ಆದರೆ ಆ ಎರಡೂ ರಾಜ್ಯಗಳಿಗೆ ಒಂದು ಅಗೋಚರ ಶಕ್ತಿಯ ಬೆಂಬಲಾಶೀರ್ವಾದ ಇದೆ. ಅದೆಂದರೆ ಕರ್ನಾಟಕದ ಸರಕಾರಗಳು ಆ ಪಕ್ಷ ಈ ಪಕ್ಷ ಎನ್ನದೆ ಉದ್ದಕ್ಕೂ ತೋರಿಸುತ್ತ ಬಂದಿರುವ ರಾಜಕೀಯ ವಿರೋಧಕ್ಕೆ ಬಳಸಿಕೊಳ್ಳುತ್ತಿರುವ ಎರಡೂ ರಾಜ್ಯಗಳ ಮುಂದೆ ಕರ್ನಾಟಕದ ಆಡಳಿತ ಕೈಕಟ್ಟಿ ನಡುಬಾಗಿಸಿ ವಿನೀತ ಭಾವದಲ್ಲಿ ನಿಂತಿರುವುದು ರಾಜ್ಯದ ದುರದೃಷ್ಟ. ಇದು ರಾಜ್ಯದ ಜನತೆಯ ಸ್ವಾಭಿಮಾನಕ್ಕೆ ಚುನಾಯಿತ ಸರಕಾರಗಳು ಎಸಗಿಕೊಂಡು ಬಂದಿರುವ ಅಪಚಾರವೂ ಹೌದು.

ಸಿದ್ದರಾಮಯ್ಯನವರು ಮುಖ್ಯಮಂತ್ರಿಯಾಗಿ 7 ತಿಂಗಳಾಗಿದೆ. ಒಮ್ಮೆಯೂ ಅವರು ತುಂಗಭದ್ರಾ ಜಲಾಶಯದ ಸಮಸ್ಯೆಯನ್ನು ಪ್ರಸ್ತಾಪಿಸಿಲ್ಲ, ಭಾರಿ ಜಲಸಂಪನ್ಮೂಲ ಸಚಿವ ಡಿ.ಕೆ.ಶಿವಕುಮಾರ್ ಅವರ ಆದ್ಯತೆಗಳೇ ಬೇರೆ ಎನಿಸುತ್ತದೆ. ಸರಕಾರ ಗಂಭೀರವಾಗಿ ಪರಿಗಣಿಸಲೇಬೇಕಿರುವ ಸಮಸ್ಯೆ ಇದು ಎಂದು ಅವರಿಗೆ ಅನಿಸಿದಂತೆ ಜನತೆ ಭಾವಿಸಲು ಅಗತ್ಯವಾದ ಸಾಂದರ್ಭಿಕ ಸಾಕ್ಷ್ಯಗಳು ಕಾಣಿಸುತ್ತಿಲ್ಲ, ಉತ್ತರ ಕರ್ನಾಟಕದ ಸಮಸ್ಯೆಗಳ ಚರ್ಚೆಗೆಂದೇ ಬೆಳಗಾವಿಯಲ್ಲಿ ನಡೆದ ವಿಧಾನಮಂಡಲದ ಅಧಿವೇಶನದಲ್ಲಿ ಕೊಪ್ಪಳ, ರಾಯಚೂರು, ಬಳ್ಳಾರಿ ಶಾಸಕರೂ ತುಂಗಭದ್ರಾದಲ್ಲಿ ತುಂಬುತ್ತಿರುವ ಹೂಳಿನ ವಿಚಾರದಲ್ಲಿ ತಲೆಕೆಡಿಸಿಕೊಂಡಿದ್ದು ವರದಿಯಾಗಿಲ್ಲ, ಶಾಸಕರಿಗೆ ಬೇಡವಾಗಿದ್ದು ಯಾವುದೇ ಸರಕಾರಕ್ಕೆ ಬೇಡವೇ ಆಗಿರುತ್ತದೆ. ಅದು ಅನುಕೂಲಸಿಂಧು ರಾಜಕಾರಣ. 'ಬೀಸೋ ದೊಣ್ಣೆ ತಪ್ಪಿದರೆ ಸಾವಿರ ವರ್ಷ ಆಯುಷ್ಯ' ಎನ್ನುವುದು ಇದಕ್ಕೇ ಅಲ್ಲವೇ?



ಸಿದ್ದರಾಮಯ್ಯ ವಿರೋಧ ಪಕ್ಷದ ನಾಯಕರಾಗಿದ್ದ ಅವಧಿಯಲ್ಲಿ ವಿಧಾನಸಭೆಯಲ್ಲೇ ಹೂಳಿನ ವಿಚಾರ ಪ್ರಸ್ತಾಪಿಸಿ ಉದ್ದೇಶಿತ ನವಿಲೆ ಜಲಾಶಯ ನಿರ್ಮಾಣಕ್ಕೆ ಅಗತ್ಯವಾದ ಭೂಸ್ವಾಧೀನಕ್ಕೆ ಆಗ್ರಹಿಸಿದ್ದರು. ಸರಕಾರವನ್ನು ತರಾಟೆಗೂ ತೆಗೆದುಕೊಂಡಿದ್ದರು. ಈಗ ಕುಂಬಳಕಾಯಿ-ಕುಡುಗೋಲು ಎರಡೂ ಅವರ ಸ್ವಾಧೀನದಲ್ಲೇ ಇದ್ದರೂ ಮರೆವು ಅವರನ್ನು ಆವರಿಸಿದಂತಿದೆ. ಹೀಗೆಂದ ಮಾತ್ರಕ್ಕೆ ಭೂಸ್ವಾಧೀನ ಹೇಳಿದಷ್ಟು ಸುಲಭವಲ್ಲ, 40 ಟಿಎಂಸಿ ನೀರಿನ ಧಾರಣಾ ಸಾಮರ್ಥ್ಯದ ಜಲಾಶಯವೆಂದರೆ ಅಗಾಧ ಪ್ರಮಾಣದ ಭೂಮಿ ಬೇಕು. ಅದು ನೀರಾವರಿ ಪ್ರದೇಶವೋ ಬಂಜರು ಪ್ರದೇಶವೋ ಎನ್ನುವುದಕ್ಕಿಂತ ಪೂರ್ವಾರ್ಜಿತ ಭೂಮಿಯನ್ನು ಬಿಟ್ಟುಕೊಡುವುದು ರೈತರಿಗೆ ಕಷ್ಟವಾಗುತ್ತದೆ. ಕರುಳನ್ನು ಕತ್ತರಿಸಿ ಕೊಟ್ಟಂತೆ. ಪರಿಹಾರವನ್ನು ಸಮ್ಮತ ರೀತಿಯಲ್ಲಿ ಕೊಟ್ಟ ಮಾತ್ರಕ್ಕೆ ನಿರ್ವಸಿತರ ಪುನರ್ವಸತಿಗೆ ಸರಕಾರ ಆದ್ಯತೆ ಕೊಟ್ಟ ಉದಾಹರಣೆಯೇ ಕರ್ನಾಟಕದಲ್ಲಿಲ್ಲ, ಶರಾವತಿ, ಆಲಮಟ್ಟಿ, ನಾರಾಯಣಪುರ, ತುಂಗಭದ್ರಾ ಜಲಾಶಯಗಳ ನಿರ್ವಸಿತರು ನೋವು ನೆಕ್ಕುತ್ತ ದಿನಗಳೆಯುತ್ತಿದ್ದಾರೆ. ಈ ವಿಚಾರದಲ್ಲಿ ಸರಕಾರ ನಡೆಸುವವರು ಏನು ಹೇಳಿದರೂ ನಂಬಲಾಗದ ಸ್ಥಿತಿ ರೈತರದು.

ಭೂಸ್ವಾಧೀನದ ಮಾತು ನಡೆದಿದ್ದರೂ ವಾರ್ಷಿಕ ಬಜೆಟ್‌ನಲ್ಲಿ ಅದಕ್ಕಾಗಿ ಹಣ ಮೀಸಲಿಡುವ ಪ್ರಸ್ತಾವ ಆಗಿಲ್ಲ ಎನ್ನುವುದನ್ನು ನಾವು ಗಮನಿಸಬೇಕು. ಸರಕಾರ ಸಮಾನಾಂತರ ಜಲಾಶಯ ನಿರ್ಮಾಣದ ವಿಚಾರದಲ್ಲಿ ಬದ್ಧವಾಗಿದೆ ಎಂದು ತೋರಿಸಿಕೊಳ್ಳುವ ಸಣ್ಣ ನಿದರ್ಶನವೂ ಇಲ್ಲ. ಎಂದರೆ ಗಾಳಿಯಲ್ಲಿ ಮಾತು ಹಾರಿಸುವ ನೌಟಂಕಿ ರಾಜಕೀಯವನ್ನು ಸರಕಾರ ಮಾಡುತ್ತಿರುವುದು ಸ್ಪಷ್ಟ, ಹಾಗಲ್ಲವಾದರೆ ಆಂಧ್ರಪ್ರದೇಶ, ತೆಲಂಗಾಣ ಸರಕಾರದ ಮುಖ್ಯಸ್ಥರೊಂದಿಗೆ ಚರ್ಚಿಸಿ ಉಭಯ ರಾಜ್ಯಗಳ ತುಂಗಭದ್ರಾ ನದಿನೀರಿನ ಹಕ್ಕುಗಳಿಗೆ ಕರ್ನಾಟಕ ಕನ್ನ ಹಾಕುವುದಿಲ್ಲ ಎಂದು ಮನವರಿಕೆ ಮಾಡಿಕೊಡಬಹುದಾಗಿತ್ತು. ಸಮಾನಾಂತರ ಜಲಾಶಯ ಕರ್ನಾಟಕದಲ್ಲಿ ನಿರ್ಮಾಣವಾಗುವುದು ಮೂರೂ ರಾಜ್ಯಗಳು ಆಕಸ್ಮಿಕವಾಗಿ ಎದುರಿಸಬೇಕಾಗಿ ಬರುವ ಜಲಗಂಡಾಂತರದ ಬಿಕ್ಕಟ್ಟಿಗೆ ಪರಿಹಾರವಾಗಬಹುದು ಎನ್ನುವುದನ್ನು ಸಷ್ಟಗೊಳಿಸಬಹುದಾಗಿತ್ತು. ನದಿನೀರು ಹಂಚಿಕೆ ವಿಚಾರದಲ್ಲಿ ಕೇಂದ್ರದ ಅಧೀನದಲ್ಲಿರುವ ವಿವಿಧ ಏಜೆನ್ಸಿಗಳ ಮುಂದೆ ತನ್ನದೇ ಅಹವಾಲನ್ನು ಕೇವಿಯಟ್ ಮಾದರಿಯಲ್ಲಿ ಮಂಡಿಸುವ ಮೂಲಕ ಎರಡು ರಾಜ್ಯಗಳ ಕಿರಿಕಿರಿಗೆ ಒಂದು ತಡೆಗೋಡೆ ನಿರ್ಮಿಸಬಹುದಿತ್ತು. ಊಹೂಂ, ಯಾವುದೂ ಆಗಿಲ್ಲ, ಆಗುವ ಸಾಧ್ಯತೆಯೂ ಸನಿಹ ಭವಿಷ್ಯದಲ್ಲಿಲ್ಲ.

ಈಗಂತೂ ತೆಲಂಗಾಣದಲ್ಲಿ ನಮ್ಮ ಉಪಮುಖ್ಯಮಂತ್ರಿ ಡಿಕೆಶಿಯವರದೇ ಸರಕಾರ ಎಂದು ಜನ ಆಡಿಕೊಳ್ಳುತ್ತಿರುವುದನ್ನು ಗಮನಿಸಿದರೆ ಅಲ್ಲಿಯ ಮುಖ್ಯಮಂತ್ರಿ ರೇವಂತ ರೆಡ್ಡಿ ನಮ್ಮ ಅನಿಸಿಕೆ ಭಾವನೆಗಳಿಗೆ ಸೊಪ್ಪು ಹಾಕಿಯಾರೆಂಬ ವಿಶ್ವಾಸ ಬಹಳ ತುಟ್ಟಿಯದಾಗಬಹುದು. ತುಂಗಭದ್ರಾ ಅಣೆಕಟ್ಟೆ ನಿರ್ಮಾಣವಾಗಿ ಸಾರ್ವಜನಿಕ ಬಳಕೆಗೆ ದೊರೆತಿದ್ದು 1953ರ ತರುವಾಯ. ಈಗ 70 ವರ್ಷದಲ್ಲಿ ಹೂಳನ್ನೇ ತುಂಬಿಕೊಳ್ಳುವ ಸ್ಥಿತಿಗೆ ತುಂಗಭದ್ರಾ ಒಡಲು ಬಂದಿದೆ. ಒಂದೆಡೆ ಬಳ್ಳಾರಿ, ಇನ್ನೊಂದೆಡೆ ಕೊಪ್ಪಳ, ರಾಯಚೂರು ಜಿಲ್ಲೆಯಲ್ಲಿ ಜನ, ಜಾನುವಾರು, ಪಶು-ಪಕ್ಷಿಗಳಿಗೆ ನೀರಿನ ಆಸರೆಯಾಗಿರುವ ಎಡದಂಡೆ ಬಲದಂಡೆ ಕಾಲುವೆಗಳು ನೀರಿಗಾಗಿ ಬಾಯಿ ಬಾಯಿ ಬಿಡುವ ಕಾಲ ಬಹಳ ದೂರದಲ್ಲಿಲ್ಲ, ಗಡ್ಡಕ್ಕೆ ಬೆಂಕಿ ಬಿದ್ದಾಗ ನೀರಿಗಾಗಿ ಬಾವಿ ತೋಡುವ ಪ್ರವೃತ್ತಿಯನ್ನು ಸರಕಾರ ಬಿಡಬೇಕು. ಸಿದ್ದರಾಮಯ್ಯನವರು ಫೆಬ್ರುವರಿ 17ರಂದು ಮಂಡಿಸಲಿರುವ ಬಜೆಟ್‌ನಲ್ಲಿ ನವಿಲೆ ಯೋಜನೆಗೆ ಶ್ರೀಕಾರ ಹಾಡುವ ಪ್ರಸ್ತಾವ ಆಗಬೇಕು. ಬಜೆಟ್ ಪೂರ್ವದಲ್ಲಿ ರೈತ ಸಂಘಟನೆಗಳೊಂದಿಗೆ ಮುಖ್ಯಮಂತ್ರಿ ಚರ್ಚಿಸುವುದು ವಾಡಿಕೆ. ಆ ಸಮಯದಲ್ಲಿ ರೈತಾಪಿ ವಲಯವನ್ನು ಪ್ರತಿನಿಧಿಸುವವರು ನಿದ್ರೆಗೆ ಜಾರದೆ ಬಾರುಕೋಲನ್ನು ಝಳಪಿಸಬೇಕು. ಗುರಿ ಒಂದೇ ಆಗಿದ್ದರೂ ಮಾರ್ಗ ಬೇರೆ ಬೇರೆ ಆಗಿ ಹರಿದು ಹಂಚಿಹೋಗಿರುವ ರೈತ ಸಂಘಟನೆಗಳಿಂದ ಜನ

# ಬಿಟ್ಟಿ ಸಲಹೆ ಕೊಡುವವರೆಲ್ಲ ಹಿತಚಿಂತಕರಲ್ಲ

ಒಂದೊಳ್ಳೆ ಮಾತು




ರೂಪಾ ಗುರುರಾಜ್

rgururaj628@gmail.com


ಸುಮಾರು ಅರವತ್ತರ ಆಸುಪಾಸಿನ ನಾಲ್ಕು ಜನ, ಸ್ನೇಹಿತರು ಪ್ರತಿದಿನ ಸಂಜೆ ಹೊತ್ತಿನಲ್ಲಿ ಒಂದು ಪಾರ್ಕಿನಲ್ಲಿ ಸೇರುತ್ತಿದ್ದರು. ಸ್ವಲ್ಪ ಸಮಯ, ಹರಟೆ ಹೊಡೆದು ಚಹಾ ಸೇವಿಸಿ ಮನೆಗೆ ತೆರಳುತ್ತಿದ್ದರು.

ಒಂದು ದಿನ ಪಾರ್ಕಿನಲ್ಲಿ ಎಲ್ಲರೂ ಹೀಗೆ ಸೇರಿದಾಗ, ಒಬ್ಬ ವ್ಯಕ್ತಿ ಮಾತ್ರ ಏನೂ ಮಾತಾಡದೇ ಬಹಳ ಸಪ್ಪಗಿದ್ದರು. ಉಳಿದ ಮೂರು ಜನ ಸ್ನೇಹಿತರೂ, ಏನಾಯ್ತು ಬಹಳ ಬೇಜಾರಿನಲ್ಲಿರುವಂತೆ ಕಾಣುತ್ತಿರುವಿರಲ್ಲಾ, ಮೈಯಲ್ಲಿ ಹುಷಾರಿಲ್ಲವೇ ಎಂದು ಕೇಳಿದರು. 'ಹಾಗೇನಿಲ್ಲ ಹುಷಾರಾಗೇ ಇದ್ದೇನೆ, ನನ್ನ ಮಗನದೇ ಸ್ವಲ್ಪ ಚಿಂತೆಯಾಗಿದೆ' ಎಂದು ಉಗುಳು ನುಂಗಿಕೊಂಡರು.

'ಯಾಕೆ ಏನಾಯ್ತು ಅವನಿಗೆ?' ಎಂದು ನಾಲ್ಕು ಜನರಲ್ಲಿ ಒಬ್ಬರು ಕೇಳಿದರು. 'ಏನಿಲ್ಲಾ, ಎಷ್ಟೇ ಹೇಳಿದರೂ ಓದುವ ಕಾಲದಲ್ಲಿ ಗಮನವಿಟ್ಟು ಸರಿಯಾಗಿ ಓದಲಿಲ್ಲ, ಸರಿಯಾದ ಒಂದೊಳ್ಳೆ ಕೆಲಸವೂ ಇಲ್ಲ, ಹೇಗಾದರೂ ಕಷ್ಟಪಟ್ಟು ದುಡಿಯಬೇಕೆಂಬುದೂ ಇಲ್ಲ, ಸಾಲದಕ್ಕೆ ಕೆಟ್ಟ ಸ್ನೇಹಿತರ ಸಹವಾಸ ಬೇರೆ, ಯಾವುದರ ಜವಾಬ್ದಾರಿಯೂ ಇಲ್ಲ. ನನಗೂ ವಯಸ್ಸಾಗುತ್ತಾ ಬಂತು. ಮುಂದೆ ಇವನು ಜೀವನ ಹೇಗೆ ನಡೆಸುತ್ತಾನೆ, ಎಂದು ಅವನದೇ ಚಿಂತೆಯಾಗುತ್ತಿದೆ. ಎಲ್ಲಾ ರೀತಿಯಲ್ಲೂ ಬುದ್ಧಿವಾದ ಹೇಳಿದರೂ ಅವನ ತಲೆಗೆ ಯಾವುದೂ ಹೋಗುವುದೇ ಇಲ್ಲ, ಏನು ಮಾಡುವುದೆಂದು ಅವನದೇ ಚಿಂತೆಯಾಗಿದೆ' ಎಂದು ಕಣ್ಣಲ್ಲಿ ನೀರು ತುಂಬಿಕೊಂಡರು.

ಆಗ ಅವರ ಸ್ನೇಹಿತರಲ್ಲಿ ಒಬ್ಬರು, 'ಇಂತಹ ಮಕ್ಕಳನ್ನು ಎಷ್ಟು ದಿನ ಅಂತ ಮನೆಯಲ್ಲಿ ಇಟ್ಟುಕೊಳ್ಳಲಿಕ್ಕಾಗುತ್ತದೆ? ಜತೆಯಲ್ಲಿ ಇಟ್ಟುಕೊಂಡು ಹೀಗೆ ದುಃಖ ಅನುಭವಿಸುವುದಕ್ಕಿಂತ, ನಿನ್ನ ದಾರಿ ನೀನೂ ನೋಡಿಕೋ ಎಂದು ಮನೆಯಿಂದ ಹೊರಗೆ ಕಳಿಸಿ , ಆಗ ಅವನಿಗೆ ಬುದ್ಧಿ ಜವಾಬ್ದಾರಿ ಎಲ್ಲಾ ಬರುತ್ತದೆ. ಅವನಿಗೆ ಬೇಕಾದಂತೆ ಅವನು ಬದುಕಲಿ ಬಿಡಿ, ನಮಗೆ ಮಕ್ಕಳೇ ಇಲ್ಲ ಎಂದುಕೊಂಡು ನೀವಾದರೂ ನೆಮ್ಮದಿಯ ಜೀವನ ನಡೆಸಿ, ಇಂಥ ಮಕ್ಕಳಿದ್ದರೆಷ್ಟು ಬಿಟ್ಟರೆಷ್ಟು' ಎಂದು ಸ್ವಲ್ಪ ಕಠೋರವಾಗಿ ಹೇಳಿದರು.

ಆಗ ಆತ, 'ಅದೆಲ್ಲಾ ಆಗುವುದಿಲ್ಲ, ನನ್ನ ಹೆಂಡತಿಗೆ ಮಗನನ್ನು ಬಿಟ್ಟಿರಲು ಆಗುವುದಿಲ್ಲ, ಇಂದಲ್ಲ ನಾಳೆ ಅವನು ಸರಿ ಹೋಗಬಹುದೆಂಬ ನಂಬಿಕೆಯಲ್ಲಿದ್ದಾಳೆ. ಹೀಗಿರುವಾಗ ನಾನು ಹಾಗೆ ಮಾಡಲು ಸಾಧ್ಯವಿಲ್ಲ. ಈ ವಯಸ್ಸಿನಲ್ಲಿ ಮಗನನ್ನು ಬಿಟ್ಟು ನಾವು ಇಬ್ಬರೇ, ಇರುವುದೂ ಸ್ವಲ್ಪ ಕಷ್ಟವಲ್ಲವೇ?' ಎಂದು ಕೇಳಿದರು.

'ಹಾಗಿದ್ದರೆ ಜೀವನಪರ್ಯಂತ ನೀವು ಹೀಗೇ ಕಷ್ಟ ಅನುಭವಿಸಬೇಕಾಗುತ್ತದೆ ಅಷ್ಟೇ' ಎಂದು ಆ ವ್ಯಕ್ತಿ ಸ್ವಲ್ಪ ನಿಷ್ಠುರವಾಗಿ ಹೇಳಿದರು.

ಇಷ್ಟು ಹೊತ್ತು ಇವರಿಬ್ಬರ ಮಾತನ್ನು ಕೇಳಿಸಿಕೊಳ್ಳುತ್ತಿದ್ದ ಇನ್ನೊಬ್ಬ ಸ್ನೇಹಿತರು, ಈ ಮತ್ತೊಬ್ಬ ವ್ಯಕ್ತಿಗೆ, 'ನಿಮ್ಮ ಮಗ ಈಗ ಎಲ್ಲಿದ್ದಾನೆ, ಎಲ್ಲಿ ಕೆಲಸ ಮಾಡುತ್ತಿದ್ದಾನೆ? ಅವನು ಕೂಡಾ ಮೊದಲೆಲ್ಲಾ ಅಷ್ಟು ಸರಿ ಇರಲಿಲ್ಲ ಅಲ್ಲವೇ? ಕೆಟ್ಟ ಸಹವಾಸಕ್ಕೆ ಬಿದ್ದಿದ್ದ ಎಂದು ಕೇಳಲ್ಪಟ್ಟೆ, ಅದು ನಿಜವೇ? ಈಗ ಹೇಗಿದ್ದಾನೆ, ಎಲ್ಲಿದ್ದಾನೆ' ಎಂದು ಕೇಳಿದರು.

ಈಗ ಆ ವ್ಯಕ್ತಿ ಸ್ವಲ್ಪ ತಲೆತಗ್ಗಿಸಿ, ಮೆದು ಧ್ವನಿಯಲ್ಲಿ, 'ಹೌದು ಅವನು ಕೂಡಾ ಸ್ವಲ್ಪ ಇವನ ಹಾಗೇನೇ' ಎಂದರು. 'ಅವನನ್ನೂ ಮನೆಯಿಂದ ಆಚೆ ಕಳಿಸಿಬಿಟ್ಟೀರಾ ಹೇಗೆ?' ಎಂದು ಕೇಳಿದರು. ಆಗ ಈ ವ್ಯಕ್ತಿ, 'ಅದ್ಹೇಗೆ ಆಗುತ್ತೆ? ನಮಗಿರುವವನು ಅವನೊಬ್ಬನೇ ಮಗ, ಅಷ್ಟಕ್ಕೂ ನನ್ನ ಹೆಂಡತಿಗೆ ಅವನನ್ನು ಒಂದು ದಿನವೂ ಕೂಡಾ ಬಿಟ್ಟಿರಲು ಆಗುವುದಿಲ್ಲ, ಆಚೆ ಕಳಿಸಲು ಖಂಡಿತ ಆಕೆ ಒಪ್ಪುವುದಿಲ್ಲ, ಮಗ ಹೇಗಿದ್ದರೂ ಮಗನೇ ಎಂಬುದು ಅವಳ ವಾದ' ಎಂದರು.

ಪ್ರಪಂಚ ಹೀಗಿದೆ ಎಂಬುದಕ್ಕೆ ಇದೊಂದು ಚಿಕ್ಕ ನಿದರ್ಶನ ಅಷ್ಟೇ. ಬುದ್ಧಿ ಹೇಳುವವರೆಲ್ಲ ಅದನ್ನು ಆಚರಿಸುತ್ತಿರುವುದಿಲ್ಲ. ಯಾರ ಬಳಿ ನಿಮ್ಮ ಮನೆಯ ಸ್ವಂತದ ವಿಷಯಗಳನ್ನು ಹೇಳಬೇಕು, ಹೇಳಬಾರದು ಎನ್ನುವ ಸೂಕ್ಷ್ಮ ನಿಮಗೆ ತಿಳಿದಿರಲಿ.

CENTRAL UNIVERSITY OF KARNATAKA

**Any Feedback**

**Contact Us**

# Central Library

08477-226717

librarian@cuk.ac.in

http://cuklibrary.ac.in/index.html

**Central University of Karnataka, Kalaburagi-585367,India**